*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಮೈಸೂರು ಸಂಸ್ಥಾನದ ರಾಜಪ್ರಮುಖರು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿರತಕ್ಕ ಪದ್ಧತಿಗನುಸಾರವಾಗಿ ಮೈಸೂರು ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಅವರು ಕೆಲವು ಮುಖ್ಯಾಂಶಗಳನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ ಮೊದಲನೆಯದು ರಾಜ್ಯಗಳ ಪುನರ್ವಿಂಗಡಣೆಯ ವಿಚಾರ. ಈಗಾಗಲೇ ಈ ಮಾನ್ಯ ಸಭೆಯ ಸದಸ್ಯರು ಕೆಲವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ರಾಜಪ್ರಮುಖರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಪರವಾಗಿ ಅವರಿಗೆ ವಂದನೆಗಳನ್ನು ಅರ್ಪಿಸತಕ್ಕ ಬಗ್ಗೆ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಶ್ರೀ ಕೆ. ಪುಟ್ಟಸ್ವಾಮಿಯವರು ಈ ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ಇತ್ತೀಚೆಗೆ ಎದ್ದಿರತಕ್ಕ ಆ ''ದಕ್ಷಿಣ ಪ್ರದೇಶ''ದ ವಿಷಯವನ್ನು ಪ್ರಸ್ತಾಪಿಸುತ್ತ ಅದು ಕತ್ತಲೆಯ ಮನೆಗೆ ಒಂದು ನಂದಾ ದೀಪ ಬಂದ ಹಾಗಿದೆಯೆಂದೂ ಬತ್ತಿ ಹೋದ ಕೆರೆಗೆ ನೀರು ಬಂದ ಹಾಗೆ ಆ ವಿಷಯ ಬಂದಿದೆಯೆಂದೂ ಹೀಗೆ ಇನ್ನೂ ಏನೇನೋ ಉಪಮಾನ ಉಪಮೇಯಗಳನ್ನು ಅವರು ಬಹಳ ಹೆಚ್ಚಾಗಿ ಹೇಳಿರುತ್ತಾರೆ. ಆದರೆ ಇದೇ ಸಂದರ್ಭದಲ್ಲಿ ಶ್ರೀ ಎ. ಭೀಮಪ್ಪನಾಯಕರು ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾ ಈ ರೀತಿಯ ಒಂದು ಕೂಗು ಎದ್ದಿರುವುದರಿಂದ ದೇಶದಲ್ಲಿ ತುಂಬ ಗೊಂದಲವೇಳುವುದಕ್ಕೆ ಕಾರಣವಾಯಿತು ಎನ್ನುತ್ತಿದ್ದ ಹಾಗೆಯೇ ಆ ಗೊಂದಲಗಳು ಹೀಗೆ ಇನ್ನೂ ಭದ್ರವಾಗಿ ಉಳಿದ ಕೊಂಡು ಬರುವ ಹಾಗೆ ಕಾಣುತ್ತಿದೆ ಎಂದು ಹೇಳಿದ್ದಾರೆ. Confusion worse confounded ಎಂಬುದಾಗಿ ಅವರು ಹೇಳಿರುತ್ತಾರೆ. ಅಷ್ಟೇ ಅಲ್ಲದೆ ಇನ್ನೂ ಈಗ ತಾನೆ ಭಾಷಣ ಪೂರೈಸಿದ ವಿರೋಧ ಪಕ್ಷದ ನಾಯಕರು ಮಾತನಾಡುತ್ತ ಈ ರೀತಿಯಾಗಿ ದೇಶದ ಮುಂದೆ ಹೊಸ ಹೊಸ ಸಮಸ್ಯೆಗಳನ್ನು ತರುತ್ತಿದ್ದರೆ ಇದರಿಂದ ದೇಶದಲ್ಲಿ ಗೊಂದಲವೇಳುವುದಕ್ಕೆ ಹೆಚ್ಚಿನ ಒಂದು ಅವಕಾಶವಾಗುತ್ತದೆ. ಆದುದರಿಂದ ಹೀಗೆ ಗೊಂದಲಕ್ಕೆ ಕಾರಣ ಉಂಟುಮಾಡುವುದು ಒಳ್ಳೆಯದಲ್ಲ ಎಂದು ಹೇಳಿದರು. ಈಗ ನಾನು ಈ ವಿಚಾರದಲ್ಲಿ ನನ್ನ ಅಭಿಪ್ರಾಯವೇನಿದೆ ಎನ್ನುವುದನ್ನು ಹೇಳಬೇಕೆಂದಿದ್ದೇನೆ. ಈ ರಾಜ್ಯಗಳ ಪುನರ್ವಿಂಗಡಣೆ ಎನ್ನುವುದೇನೂ ಒಂದು ಹೊಸ ವಿಷಯವಲ್ಲ. ಆದಾಗ್ಗೂ ಇದು ಒಂದು ಸಾಮಾನ್ಯ ವಿಷಯವಾಗಿಯೇನೂ ನಮ್ಮ ರಾಷ್ಟ್ರದ ನಾಯಕರ ಮುಂದೆ ನಿಂತಿಲ್ಲ. ಇದು ಬಹಳ ಕಾಲದ ಹಿಂದಿನಿಂದಲೂ ಇದ್ದು ಇದರ ಚಳವಳಿ ನಡೆಯುತ್ತಲೇ ಬಂದಿದೆ. ಅಷ್ಟೇ ಅಲ್ಲದೆ ಇದೊಂದು ರಾಷ್ಟ್ರದ ಸ್ವಾತಂತ್ರ್ಯ ಚಳವಳಿಯ ಅಂಗವಾಗಿ ದಿನದಿನಕ್ಕೂ ಬೆಳೆಯುತ್ತಾ ಬಂದಿದೆ ಎಂದು ಹೇಳಿದರೆ ಇದೇನೂ ಒಂದು ಉತ್ಪ್ರೇಕ್ಷೆಯಾಗಲಾರದು. ಈ ಹಿಂದೆ ಶ್ರೀಮಾನ್ ಎ. ಜಿ. ರಾಮಚಂದ್ರರಾಯರು ‘ಈ ಭಾಷಾವಾರು ಭಾವನೆಯನ್ನು ಜನರಲ್ಲಿ ತುಂಬಿದ್ದರಿಂದ ಹಿಂದೆ ರಾಷ್ಟ್ರದ ಸ್ವಾತಂತ್ರ್ಯ ಸಾಧನೆಗೆ ಬಹಳ ಅನುಕೂಲವಾಯಿತು, ಆಗಿನ ಚಳವಳಿಗೆ ಬಹಳ ಬೆಂಬಲ ದೊರೆಯಿತು ಆದರೆ ಹಾಗೆಲ್ಲಾ ಹಿಂದೆ ಜನರಿಗೆ ಈ ರೀತಿಯ ಒಂದು ಹುರುಪನ್ನು ತುಂಬಿ ದೇಶಕ್ಕೆ ಬೇಕಾಗಿದ್ದ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ನಂತರ ಈಗ ಇದರ ಅವಶ್ಯಕತೆ ಅಷ್ಟಿಲ್ಲ’ವೆಂದು ಹೇಳಿದ್ದರು. ಆದರೆ ಜನರಿಗೆ ತಾವು ಯಾವುದೇ ಒಂದು ಭಾವನೆಯಿಟ್ಟುಕೊಂಡು ಹೇಳಿದ್ದರೂ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅದನ್ನು ನೆರವೇರಿಸದಿದ್ದರೆ ಅದು ಆ ಸ್ವಾತಂತ್ರ್ಯಕ್ಕೆ ಒಂದು ಕಳಂಕ ಹಾಗೂ ಒಂದು ಮಾರಕವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ. ಈ ರಾಜ್ಯಗಳ ಪುನರ್ವಿಂಗಡಣೆಯ ವಿಚಾರವಾಗಿ ಅನೇಕ ಚರ್ಚೆಗಳು ನಡೆದಿವೆ; ಅನೇಕ ಸಭೆಗಳನ್ನು ನಡೆಸಿದ್ದಾರೆ; ಅನೇಕ ಸಮಿತಿಗಳನ್ನು ನೇಮಕಮಾಡಿದ್ದಾರೆ. ದೇಶಾದ್ಯಂತವೂ ಈಗಾಗಲೇ ಒಂದು ವಾತಾವರಣ ಮೂಡಿ ಬಂದಿದೆ. ಇಂಥ ವಾತಾವರಣದಿಂದಲೇ ಭಾಷಾವಾರು ರಾಜ್ಯ ಸ್ಥಾಪನೆಗಾಗಿ ಆ ಮದರಾಸ್ ಪ್ರಾವಿನ್ಸ್ ಒಡೆಯಲ್ಪಟ್ಟು ಆಂಧ್ರ ಪ್ರಾಂತ್ಯ ನಿರ್ಮಾಣವಾಯಿತು. ಅದರಂತೆ ಇನ್ನೂ ಕೆಲವು ಭಾಷಾವಾರು ಪ್ರಾಂತ್ಯಗಳು ನಿರ್ಮಾಣವಾದವು. ಅದೇ ಪ್ರಕಾರ ಮತ್ತೆ ಕೆಲವು ಕಡೆ ಭಾಷಾವಾರು ಪ್ರಾಂತ್ಯಗಳನ್ನು ರಚನೆಮಾಡಬೇಕೆಂದು ಕೇಳುತ್ತಿರುವ ಕಾಲದಲ್ಲಿ ಈ ರೀತಿಯಾಗಿ ಒಂದು ಹೊಸ ನಮೂನೆಯ ಕಾರಣವನ್ನು ಎತ್ತಿ ಕೇವಲ ಭಾಷೆಯೊಂದರ ಆಧಾರದ ಮೇಲೇ ರಾಜ್ಯಗಳನ್ನು ನಿರ್ಮಾಣ ಮಾಡುವುದು ಸರಿಯಾದುದಲ್ಲ ಎಂದು ಹೇಳುವುದಕ್ಕೆ ಹೊರಟಿದ್ದಾರೆ. ಇದೇ ಸಂದರ್ಭದಲ್ಲಿ ಇಡೀ ಭಾರತ ದೇಶದ ಭೌಗೋಳಿಕ, ಹಾಗೂ ಆಡಳಿತ ಸೌಕರ್ಯಗಳಿಗನುಗುಣವಾಗಿ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಲು ಒಂದು ಸಮಿತಿಯನ್ನು ಫಜ್ಲಾಲಿಯವರ ನೇತೃತ್ವದಲ್ಲಿ ರಚಿಸಲಾಗಿತ್ತು. ಆ ಸಮಿತಿಯವರು ಒಂದು ವರ್ಷಕಾಲ ದೇಶಾದ್ಯಂತವೂ ಓಡಾಡಿ ಹತ್ತಾರು ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಖರ್ಚುಮಾಡಿ ಆ ಸಮಿತಿಯವರು ಒಂದು ವರದಿಯನ್ನು ತಯಾರಿಸಿದರು. ಆದರೆ ಹಾಗೆ ಅವರು ತಯಾರು ಮಾಡಿದ ವರದಿಯಲ್ಲಿ ದೇಶದಲ್ಲಿರತಕ್ಕಂಥ ಎಲ್ಲ ಜನರಿಗೂ ಅವರವರ ಆಶೋತ್ತರಗಳು ಈಡೇರುವಂಥ ಒಂದು ತೀರ್ಮಾನವನ್ನು ನೀಡುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಆ ಒಂದು ಕಾರಣದಿಂದ ಆ ಸಮಿತಿಯವರು ಒಪ್ಪಿಸಿದ ವರದಿಯನ್ನು ಕುರಿತು ''ಇದು ಕಸದ ಬುಟ್ಟಿಗೆ ಹಾಕುವುದಕ್ಕೆ ಯೋಗ್ಯವಾಗಿದೆ; ಅಷ್ಟು ಹೊರತು ಕಾರ್ಯಗತ ಮಾಡುವುದಕ್ಕೆ ಯೋಗ್ಯವಾಗಿಲ್ಲ'' ಎಂಬ ಒಂದು ಕೂಗನ್ನು ದೇಶದಲ್ಲಿ ಎಬ್ಬಿಸಲು ಕೆಲವರು ಪ್ರಾರಂಭಮಾಡಿದ್ದಾರೆ. ಆದರೆ ಈ ವರದಿಯ ಬಗ್ಗೆ ಎಂದರೆ ಫಜ್ಲಾಲಿ ವರದಿಯ ಬಗ್ಗೆ ಮೊದಲನೆಯ ಶ್ಲಾಘನೆಯನ್ನು ಮಾಡಿದ್ದವರು ಆ ನೆಹರೂ ಅವರೇ. ಅವರು ''ನಾನು ಈ S.R.C. ವರದಿಯನ್ನು ವಿಮಾನದಲ್ಲೇ ಸಂಚಾರಮಾಡುತ್ತಾ ಓದಿದೆನು. ಮುಝೆ ಆಶ್ಚರ್ಯ ಹೂವಾ'' ಎಂದು ಹೇಳಿದ್ದಾರೆ. ಹೀಗೆ ಇನ್ನೂ ಅನೇಕರಿಗೆ ಇದು ಆಶ್ಚರ್ಯವಾಗಿಯೂ ಕಂಡು ಬಂದಿತ್ತು; ಮತ್ತೆ ಕೆಲವರಿಗೆ ಆನಂದವೂ ಆಯಿತು; ಕೆಲವರಿಗೆ ದುಃಖವೂ ಆಯಿತು. ಆ ಸಮಿತಿಯವರು ಹೀಗೆಲ್ಲಾ ಆಗಲು ತಮ್ಮ ವರದಿಯಲ್ಲಿ ಏನು ಮಾಡಿರುತ್ತಾರೆಂದರೆ: ದೇಶದ ಒಂದೊಂದ ಭಾಗಕ್ಕೆ ಒಂದೊಂದು ರೀತಿಯ ಶಿಫಾರ್ಸನ್ನು ಮಾಡಿರುತ್ತಾರೆ. ಅದರಿಂದಲೇ ದೇಶ

ದಲ್ಲಿ ಈ ರೀತಿಯ ಗೊಂದಲವೇಳುವುವಕ್ಕೆ ಅವಕಾಶವಾಯಿತು. ಹೀಗೆ ಮಾಡುವುದಕ್ಕೆ ಬದಲಾಗಿ ಅವರು ತಮ್ಮ ವರದಿಯಲ್ಲಿ ಏನಾದರೂ ಆಗಲಿ ಎಂಬುದಾಗಿ ಒಂದು ನಿರ್ದಿಷ್ಟವಾದ ನೀತಿ ನಿಯಮವನ್ನು ಪಾಲಿಸಿಕೊಂಡು ಬಂದಿದ್ದರೆ, ಒಂದು ಖಚಿತವಾದ ತೀರ್ಮಾನ ಕೊಟ್ಟಿದ್ದರೆ, ಹೀಗೆಲ್ಲಾ ದೇಶದಲ್ಲಿ ಪ್ರತಿಕ್ರಿಯೆ ಉಂಟಾಗುವುದಕ್ಕೆ ಬದಲಾಗಿ ಜನರು ಒಪ್ಪಿಕೊಳ್ಳುತ್ತಲೇ ಇದ್ದರು. ಆದರೆ ಅವರು ಹಾಗೆ ಮಾಡಲಿಲ್ಲ. ಒಂದೊಂದು ಭಾಗಕ್ಕೂ ಒಂದೊಂದು ವೈಖರಿಯನ್ನು ಉಪಯೋಗಿಸಿದ್ದಾರೆ. ಕಾಸರಗೋಡನ್ನು ಕೇರಳಕ್ಕೆ ಸೇರಿಸಬೇಕೆಂದು ಹೇಳಿರತಕ್ಕ ವಾಗ್ ವೈಖರಿ ಒಂದು ರೀತಿಯಾಗಿದ್ದರೆ ಬಳ್ಳಾರಿಯನ್ನು ವಾಪಸ್ಸು ಆಂಧ್ರಕ್ಕೆ ಬಿಟ್ಟು ಕೊಡಬೇಕೆಂದು ಹೇಳಿರತಕ್ಕ ವೈಖರಿಯೇ ಮತ್ತೊಂದು ರೀತಿಯಾಗಿದೆ. ಹೀಗೆಯೇ ಉತ್ತರ ಪ್ರದೇಶಕ್ಕೊಂದು ರೀತಿಯ ವೈಖರಿ ಆದರೆ, ಹಿಮಾಚಲ ಪ್ರದೇಶಕ್ಕೇ ಒಂದು ರೀತಿಯ ವೈಖರಿಯನ್ನು ಹೇಳಿದ್ದಾರೆ. ಆದರೆ ಅವರು ನಮ್ಮ ಕೋಲಾರದ ಬಗ್ಗೆ ಸಹ ಹೇಳಿರತಕ್ಕ ವಾದ ಸರಿಯಾಗಿಲ್ಲ.

ಹೀಗೆ ಪ್ರತಿಯೊಂದು ಕಡೆಯೂ ಅವರ ವಾದ ಇಷ್ಟರ ಮಟ್ಟಿಗೆ ಅಸಮಂಜಸ ಮತ್ತು ಇಷ್ಟರ ಮಟ್ಟಿಗೆ ಯಾವುದೋ ಒಂದು ಹೊರಗಡೆ ಪ್ರಭಾವದಿಂದ ಉಂಟಾದಂತೆ ಮಾಡಿದ್ದು. ಅದರಿಂದ ಏನಾಯಿತು? ಸಹಜವಾಗಿಯೇ ದೇಶದಲ್ಲಿ ಅಸಂತೋಷವುಂಟಾಯಿತು. ಯಾರಿಗೆ ತಾನೆ ಆಗಲಾರದು? ಬಳ್ಳಾರಿಯಂಥಾ ಪ್ರದೇಶವನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸೇರಿಸಿಕೊಳ್ಳಿ ಎಂದರು. ಇನ್ನೂ ಎರಡು ಮೂರು ವರ್ಷ ಕೂಡ ಆಗಿಲ್ಲ, ಮತ್ತೆ ಯಾರೋ ಒಬ್ಬರು ಆ ರೀತಿ ಆಗುವುದಿಲ್ಲ ಎಂದು ಹೇಳಿದ ಮಾತ್ರಕ್ಕೇ ಅದನ್ನು ಬೇರೆಯವರಿಗೆ ಕೊಡುವುದಕ್ಕೆ ಹೊರಟರು. ಅದರಿಂದ ಏನಾಯಿತು? ಮತ್ತಷ್ಟು ಘರ್ಷಣೆಗೆ ವಿವಾದಕ್ಕೆ ಅದು ಎಡೆ ಕೊಟ್ಟಿತು. ಒಗ್ಗೊಟ್ಟಾದ ಮೇಲೆ ಅವರು ಮುಂದಿನ ಹೆಜ್ಜೆ ಏನು ಇಡಬೇಕಾಗಿತ್ತು? ವರದಿಯಲ್ಲಿ ಏನು ಹೇಳಿದೆಯೋ ಅದನ್ನು ಕಣ್ಣು ಮುಚ್ಚಿಕೊಂಡು ಕಾರ್ಯಗತ ಮಾಡುವುದೊ ಅಥವಾ ಅದರಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿದರೆ ಆ ಬದಲಾವಣೆಗಳ ಬಗ್ಗೆ ಉಭಯತ್ರರೂ ಒಪ್ಪಿದರೆ ಅಂಥ ಸಲಹೆಯನ್ನು ಕಾರ್ಯಗತ ಮಾಡುವುದೂ ನ್ಯಾಯ. ಇನ್ನು ಉಳಿದಿರತಕ್ಕ ಒಂದು ಮಾರ್ಗ ಏನೆಂದರೆ ಯಾವಯಾವ ಭಾಗವನ್ನು ವಿವಾದಾಸ್ಪದ ಭಾಗ ಎಂದು ಕರೆಯುತ್ತೇವೆಯೋ ಅಂಥದಕ್ಕೆ ಬೌಂಡರಿ ಕಮಿಷನ್ ರಚಿಸಬೇಕು. ಅದಕ್ಕೆ ಬೇರೆ ಜ್ಯುಡಿಷಿಯಲ್ ಕಮಿಷನ್ ರಚಿಸಬೇಕಾಗುತ್ತದೆ. ಅದು ಹೆಚ್ಚು ಕಷ್ಟದ ಕೆಲಸವಾಗಬಹುದು. ಆದರೆ ಬೇರೆ ಮಾರ್ಗವಿಲ್ಲ. ಇದಕ್ಕೆ ಬದಲಾಗಿ ಅವರು ಏನು ಮಾಡಿದರು ಎಂಬುದನ್ನು ನಾವು ಸ್ವಲ್ಪ ದೂರದೃಷ್ಟಿಯಿಂದ ಮತ್ತು ಯಾವ ಒಂದು ಪಕ್ಷದ ದೃಷ್ಟಿಯಿಂದಲೂ ಅಲ್ಲದೆ ನೋಡಿದರೆ ಗೊತ್ತಾಗುತ್ತದೆ. ಶ್ರೀಮಾನ್ ನೆಹರೂರವರು, ಪಂತರು, ಆಜಾದರು ಮತ್ತು ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಈ ನಾಲ್ಕು ಜನರ ಒಂದು ಸಮಿತಿ ಮಾಡಿಕೊಂಡರು. ಮೊದಲ ಚರ್ಚೆ ಏನು ಕಾಣುತ್ತಾ ಇತ್ತು ಎಂದರೆ ಕಾಂಗ್ರೆಸ್ ಪಕ್ಷ ಒಂದು ದೊಡ್ಡ ಆಡಳಿತ ಪಕ್ಷ, ಹೆಚ್ಚು ಜವಾಬ್ದಾರಿ ಹೊಂದಿರತಕ್ಕ ಪಕ್ಷ, ಆದ್ದರಿಂದ ಇದನ್ನು ಕೂಲಂಕಷವಾಗಿ ವಿಚಾರ ಮಾಡುತ್ತದೆ ಎಂದು ದೇಶ ತಿಳಿದುಕೊಂಡಿತ್ತು. ಆದರೆ ಹೀಗೆ ಇಲ್ಲಿ ಚರ್ಚೆ ಮಾಡುವುದು, ಆ ಕಡೆ ಒಂದು ಸರ್ಕಾರದ ಮಾತು ಎಂದು ಹೇಳುವುದು, ಬಹಳ ವಿಚಿತ್ರವಾಗಿ ಕಾಣುತ್ತದೆ. ಚರ್ಚೆ ಮಾಡುವ ಸ್ಥಳಕ್ಕೂ ಬೇರೆ ಕಡೆ ಬಂದು ಹೇಳುವುದಕ್ಕೂ ಹೆಚ್ಚು ದೂರ ಕೂಡ ಇಲ್ಲ ಮತ್ತು ಹೇಳತಕ್ಕ ವ್ಯಕ್ತಿಗಳಲ್ಲೂ ಹೆಚ್ಚಿನ ಬದಲಾವಣೆ ಇಲ್ಲ; ಅದೇ ವ್ಯಕ್ತಿ ಅಲ್ಲಿ ಕುಳಿತುಕೊಂಡು ವಿಚಾರ ಮಾಡಿ ಮತ್ತೆ ಇಲ್ಲಿ ಬಂದು ಈ ಸ್ಥಾನದಿಂದ ಹೀಗೆ ಮಾಡಬೇಕು ಎಂದು ಹೇಳಿ ತೀರ್ಮಾನ ಕೊಟ್ಟರು. ಈ ಪ್ರಾಂತ್ಯವನ್ನು ಈ ರೀತಿ ಮಾಡುತ್ತೇವೆ, ಬೊಂಬಾಯನ್ನು ಮಹಾರಾಷ್ಟ್ರಕ್ಕೆ ಕೊಡುವುದಿಲ್ಲ, ಕೊಡುವುದಕ್ಕಾಗುವುದಿಲ್ಲ ಎಂಬ ಒಂದೇವಾದ, ಬೇರೆವಾದವೇ ಇಲ್ಲ. ಏಕೆ, ಏನು ಎನ್ನತಕ್ಕ ಪ್ರಶ್ನೆಯೇ ಇಲ್ಲ. ಈ ರೀತಿ ಒಂದು ತೀರ್ಮಾನವನ್ನು ಒಂದು ದೊಡ್ಡ ಪ್ರಾಂತ್ಯದ ಮೇಲೆ ಹೊರಿಸಿದರು. ಗಾಡ್‌ಗಿಲ್‌ರವರು ಮುಂಬಯಿ ಪೇಟೆಯಲ್ಲಿ ಚರ್ಚೆಯಾಗುತ್ತದೆ ಎಂದು ಹೇಳಿದ ಮಾತ್ರಕ್ಕೇ ನೆಹರೂರವರು ಒಬ್ಬರೇ ಏಕೆ ತೆಗೆದುಕೊಂಡರು? ಇದು ರಾಷ್ಟ್ರದ ವಿಷಯ. ಇದನ್ನು ಈ ರೀತಿ ವೈಯಕ್ತಿಕವಾಗಿ ತೆಗೆದುಕೊಂಡು, ಇದರಲ್ಲಿ ವೈಯಕ್ತಿಕವಾಗಿ ಘನತೆ, ಗೌರವ ಎಲ್ಲಾ ಅಡಗಿದೆ ಎಂದು ಭಾವಿಸುವುದಕ್ಕೆ ಕಾರಣವಾದರೂ ಏನಿದೆ?

ಶ್ರೀ ಟಿ. ಮರಿಯಪ್ಪ.—ಹಾಗೆ ಭಾವಿಸಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಭಾವಿಸಿಲ್ಲ ಎಂದು ತಿಳಿದುಕೊಳ್ಳೋಣ. ಆ ಒಂದು ರೀತಿಯಲ್ಲಿ ವಿಷಯವನ್ನು ಪ್ರಚೋದಿಸಿ, ಜನತೆಯನ್ನು ಕೆರಳಿಸಿ ಅವರು ಪ್ರದರ್ಶನಗಳನ್ನು ಮಾಡತಕ್ಕ ಒಂದು ಪರಿಸ್ಥಿತಿಗೆ ದೇಶದ ಜನತೆಯನ್ನು ಎತ್ತಿಕಟ್ಟಿ, ಅಮೇಲೆ ಗುಂಡು ಹೊಡೆದು, ಜನ ಹೀಗೆ ಮಾಡಿದರು, ಹಾಗೆ ಮಾಡಿದರು ಎಂದರೆ ಇದಕ್ಕೆ ಕಾರಣರು ಯಾರು ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತದೆ. ಇದು ಇಷ್ಟು ಸುಲಭವಾಗಿ ಶ್ರೀಮಾನ್ ನೆಹರೂರವರು ದೆಹಲಿಯಲ್ಲಿ ಕುಳಿತು ತೀರ್ಮಾನ ಕೊಡತಕ್ಕ ಅಲ್ಪ ವಿಷಯವಲ್ಲ. ಜನತೆಯೇ ಗುಂಡು ಹೊಡೆದು, ಅದರಿಂದ ಉದ್ರೇಕ ಪರಿಸ್ಥಿತಿಯುಂಟಾಗಿ, ಜನತೆ ಕೆಟ್ಟ ಕೆಲಸ ಮಾಡಿದ್ದರೆ ಅದರ ಬಗ್ಗೆ ಖಂಡಿಸುವುದಕ್ಕೆ ನಾನು ಸಿದ್ಧ. ಆದರೆ ಒಂದು ವಿಷಯದಲ್ಲಿ ಮಾತ್ರ ಹೆಮ್ಮೆ ಆಯಿತು. ಏನೆಂದರೆ ದೇಶದ ಜನ ಇವೊತ್ತು ಸತ್ತಿಲ್ಲ, ಎಚ್ಚೆತ್ತಿದ್ದಾರೆ. ಅವರು ತಮ್ಮ ಒಂದು ಪ್ರಗತಿ, ತಮ್ಮ ಒಂದು ಭವಿಷ್ಯದ ಬಗ್ಗೆ ವಿರುದ್ಧವಾಗಿ ಮಾಡುವುದಕ್ಕೆ ಯಾರಾದರೂ ದೇಶದಲ್ಲಿ ಪ್ರಯತ್ನಪಟ್ಟರೆ ಅವರನ್ನು ನಿಜವಾಗಿಯೂ ವಿರೋಧಿಸುತ್ತಾರೆ ಎಂಬುದನ್ನು ಮುಂಬೈನಲ್ಲಿ, ಪೂರಿಯಲ್ಲಿ ಪ್ರದರ್ಶಿಸಿ ತೋರಿಸಿದ್ದಾರೆ. ಆ ರೀತಿ ಜನತೆ ತಮ್ಮ ಆಶೋತ್ತರ ಏನಿದೆ ಎಂಬುದನ್ನು ತೋರಿಸಿರುವುದಕ್ಕೆ ಎಷ್ಟೋ ಹೆಮ್ಮೆಯಾಗುತ್ತದೆ. ಈ ಸಂದರ್ಭದಲ್ಲಿ ಅಂಥ ಒಂದು ಸಮಸ್ಯೆಯನ್ನು ಧೈರ್ಯವಾಗಿ ಮತ್ತು ರಾಜಕೀಯ ನೈಪುಣ್ಯತೆಯಿಂದ ಮತ್ತು ನಿಸ್ವಾರ್ಥತೆಯಿಂದ, ಕರ್ತವ್ಯಮಾಡತಕ್ಕ ದೃಷ್ಟಿಯಿಂದ, ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ಅದಕ್ಕೆ ಬದಲಾಗಿ ಒಂದು ಪಲಾಯನ ಸೂತ್ರವನ್ನು ಈ ದಿನ ನಮ್ಮ ರಾಷ್ಟ್ರದ ನಾಯಕರು, ಬಹು ಜನ ಕೈಕೊಂಡಿದ್ದಾರೆ. ಈ ಸಮಸ್ಯೆಯನ್ನು ಮೂಲೆಗೆ ಒತ್ತುವ ಒಂದು ಪ್ರಯತ್ನ ನಡೆಯಿತು. ಹಿಂದೆ ಶ್ರೀಮಾನ್ ನೆಹರೂರವರೇ ಈ ಜೋನಲ್ ಕೌನ್ಸಿಲ್ ಮಾಡುತ್ತೇವೆ ಎಂದು ಒಂದು ಪ್ರಯತ್ನಮಾಡಿದರು. ಅದನ್ನೇ ನಾವು ನಮ್ಮ ಪಾರ್ಟಿಯಲ್ಲೂ ಕೂಡ ಮಾಡಿಕೊಂಡಿದ್ದೇವೆ. ಆಂಧ್ರ, ಕರ್ನಾಟಕ, ಮದರಾಸು, ಕೇರಳ ಈ ಪ್ರದೇಶಗಳಿಗೆ ಒಂದು ಜೋನಲ್ ಕೌನ್ಸಿಲ್‌ಮಾಡಿ ಅಲ್ಲಿ ಸದಸ್ಯರು ಸೇರಿ ಸಂಬಂಧಪಟ್ಟ ವಿಷಯಗಳನ್ನೆಲಾ ಚರ್ಚೆ ಮಾಡುವ ಒಂದು ವ್ಯವಸ್ಥೆಮಾಡಿಕೊಂಡಿ

(ಶ್ರೀ ಎಸ್. ಗೋಪಾಲಗೌಡ)

ದ್ದೇವೆ. ಹಿಂದೆ ಅವರು ಸೂಚಿಸಿದ್ದೂ ಕೂಡ ಅಂಥ ಒಂದು ವ್ಯವಸ್ಥೆ ಎಂದು ಹೇಳಿ ಎಷ್ಟೋ ಜನ ಅದನ್ನು ಪುರಸ್ಕರಿಸುತ್ತಾ ಇದ್ದರು. ಆ ಸಲಹೆ ಒಳಿತಾಗಬಹುದು. ಏಕೆಂದರೆ ಕಾವೇರಿ, ತುಂಗಾ ನದಿಗಳ ನೀರಿನ ವಿಷಯ ವನ್ನಾಗಲಿ ನಮಗೆ ಸಂಬಂಧಪಟ್ಟ ಇತರ ವಿಷಯಗಳ ನ್ನಾಗಲಿ ಚರ್ಚೆಮಾಡುವುದಕ್ಕೆ ಒಂದು ಕೌನ್ಸಿಲ್ ರಚನೆ ಆಗಿ ಅವರು ವಿಚಾರ ವಿನಿಮಯಮಾಡಿ ಆ ಮುಖಾಂತರ ಅನೇಕ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಬಹುದು, ಇದು ಒಂದು ಒಳ್ಳೆಯ ಸಲಹೆ ಎಂದು ಅಂದುಕೊಂಡಿದ್ದೆವು. ಆದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅದಕ್ಕೆ ಸರ್ಕಾರದ ಒಂದು ರೂಪು ಕೊಡುತ್ತೇವೆ ಅಥವಾ ಶಾಸನ ಸಭೆಯನ್ನು ಮಾಡು ತ್ತೇವೆ, ಅದನ್ನೇ ಒಂದು ಆಡಳಿತ ವ್ಯವಸ್ಥೆಯಾಗಿ ಮಾಡುತ್ತೇವೆ ಎಂಬ ಘೋಷಣೆಯನ್ನು ಮಾಡಿದರು. ನಾನು ಹೇಳಬೇಕೆಂದರೆ ಅದು ಒಂದು ತರಹ ಮೂರ್ಖ ತನ ಎಂದು ಕಾಣುತ್ತದೆ; ಕಾರ್ಯತಃ ಏನೂ ಮಾಡು ವುದಕ್ಕಾಗುವುದಿಲ್ಲ. ಆ ಸಲಹೆಯನ್ನು ತಾವೇ ನೇರ ವಾಗಿ ಹೇಳುವುದಕ್ಕೆ ಶ್ರೀಮಾನ್ ನೆಹರೂರವರು ಇಷ್ಟ ಪಡಲಿಲ್ಲ ಎಂದು ಕಾಣುತ್ತದೆ. ಅದಕ್ಕೆ ಇವರುಗಳು, ಎಂದರೆ, ಬಂಗಾಳ ಮತ್ತು ಬಿಹಾರಿನ ಮುಖ್ಯ ಮಂತ್ರಿ ಗಳಾದ ರಾಯ್ ಮತ್ತು ಸಿನ್ಹಾರವರು ಮಹಾ ವ್ಯಕ್ತಿ ಗಳು ಬಂದಂತೆ ಮುಂದೆ ಬಂದರು. ಬಹುಶಃ ಮುಖ್ಯ ಮಂತ್ರಿಗಳಾಗಿ ಅವರು ಮಾಡಿದ ತೀರ್ಮಾನಕ್ಕಾಗಿ, ಎಂದರೆ, ಅವರಿಬ್ಬರೂ ಒಂದು ಅಗ್ರಿಮೆಂಟ್ ಮಾಡಿ ಕೊಂಡರು ಎಂದು ಇದೆಯಲ್ಲಾ ಅದಕ್ಕಾಗಿ ರಾಜ್ಯಾಂ ಗದ ಪ್ರಕಾರ ಟ್ರೀಸನ್‌ಮೇಲೆ ಅವರಿಬ್ಬರನ್ನೂ ಜೈಲಿಗೆ ಕಳುಹಿಸಬಹುದು. ನಮ್ಮ ಸಂಸ್ಥಾನದ ಮುಖ್ಯ ಮಂತ್ರಿ ಆಂಧ್ರದ ಮುಖ್ಯ ಮಂತ್ರಿ ಜೊತೆಗೆ ಸೇರಿ ಕೊಂಡು ನಾವು ನಾವು ಒಂದು ಸರ್ಕಾರ ಆಗುತ್ತೇವೆ ಎಂದು ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕೆ ರಾಜ್ಯಾಂಗ ದಲ್ಲಿ ಅವಕಾಶವಿದೆಯೋ ಎಂಬುದನ್ನು ಯೋಚನೆ ಮಾಡಬೇಕು. ಇದನ್ನು ಯಾರಾದರೂ ಪ್ರಶ್ನೆಮಾಡಿ ದರೆ ಕಾಂಗ್ರೆಸ್ಸಿನವರಾಗಿ ಈ ರೀತಿ ಚರ್ಚೆಮಾಡುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಅಷ್ಟೇ ಅಲ್ಲ, ಅವರ ಬೆಂಬಲಿಗರು ಇದು ವಿಶ್ವದಲ್ಲೇ ಮಹತ್ತರವಾದ ಪವಾಡ ಎಂದು ಉದ್ವೇಗದಿಂದ ಹೇಳುತ್ತಾರೆ. ರಾಯ್ ಮತ್ತು ಸಿನ್ಹರವರ ಹೇಳಿಕೆ ಇದೆಯಲ್ಲಾ ಇದು ವಿಶ್ವದಲ್ಲೇ ಒಂದು ಪವಾಡ, ಇದು ಜಗತ್ತಿನ ಮತ್ತೊಂದು ಮಹಾ ಘಟನೆ ಎಂದು ಈ ರೀತಿ ಯಲ್ಲಿ ಹೇಳಿಸಿದರೆ, ನಾನು ಹೇಳುತ್ತೇನೆ, ಆ ರೀತಿ ಮಾಡಿದ್ದರಿಂದ ಅವರನ್ನು ಸ್ಕೇಪ್‌ಗೋಟ್ಸ್‌ನಂತೆ ಮಾಡಿದ ಹಾಗಾಯಿತು. ಅವರು ನ್ಯಾಯವಾಗಿಯೂ ಅಪರಾಧಿಗಳಲ್ಲ. ಬರೀ ಸ್ಕೇಪ್‌ಗೋಟ್ಸ್‌ನಂತೆ ಹೇಳು ವುದಕ್ಕೆ ಹೇಳುತ್ತಾರೆ ಅಷ್ಟೆ. ಅಂಥ ಯಜ್ಞಪಶು ಗಳ ಬಾಯಲ್ಲಿ ಅನ್ನಿಸಿ ಅವರು ಇಂಥ ಪ್ರಯತ್ನ ವನ್ನು ಮಾಡುತ್ತಾ ಇದ್ದಾರೆ. ಹೀಗೆಯೇ ಶ್ರೀಮಾನ್ ರಾಜಗೋಪಾಲಾಚಾರಿಯವರು ಯಾರು ಇಂಥ ಒಂದು ಭಾವನೆಗೆ ಪಿತೃ ಎಂದು ಹೇಳಿಕೊಳ್ಳುತ್ತಾ ಇದ್ದಾ ರೆಯೋ ಅವರು ಈಚೆಗೆ ಏನೇನೋ ಹೇಳಿದರು. ''ಶ್ರೀ ರಾಮಸ್ವಾಮಿನಾಯಕರು ಹೇಳತಕ್ಕ ಈ ದ್ರಾವಿಡ ಪ್ರದೇಶ ಅಥವಾ ದಕ್ಷಿಣ ಪ್ರದೇಶಕ್ಕೂ ನಾನು ಹೇಳ ತಕ್ಕದ್ದಕ್ಕೂ ಹೆಚ್ಚು ವ್ಯತ್ಯಾಸವಿಲ್ಲ, ದೃಷ್ಟಿಕೋಣದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಅವರು ಇಂಡಿಯಾ ದೇಶದ ನಮ್ಮ ರಾಷ್ಟ್ರೀಯ ಬಾವುಟ ಏನಿದೆಯೋ ಅದನ್ನು ಸುಡುವುದಕ್ಕೆ ಹೋಗುತ್ತಾರೆ, ನಾನು ಅಷ್ಟು ಹೇಳು ವುದಿಲ್ಲ. ಅವರು ನಾವು ಸ್ವತಂತ್ರ ರಾಷ್ಟ್ರವಾಗಿ ಬಾಳುತ್ತೇವೆ ಎಂದು ಹೇಳುತ್ತಾರೆಯೋ ಏನೋ? ನಾನು ಅವರ ಹತ್ತಿರ ಮಾತನಾಡಿಲ್ಲ. ನನ್ನ ಅವರ ಯೋಜನೆ ಹೆಚ್ಚು ಕಮ್ಮಿ ಒಂದೇ'' ಎಂದು ಶ್ರೀಮಾನ್ ರಾಜಗೋಪಾಲಾಚಾರಿಯವರು ಈಚೆಗೆ ಒಂದು ಹೇಳಿಕೆ ಕೊಟ್ಟರು—ಶ್ರೀಮಾನ್ ಭೀಮಪ್ಪನಾಯಕರು ಈಗ ಇಲ್ಲಿ ಇಲ್ಲ—ಅವರು ಹೇಳಿದಷ್ಟು ಅರಳುಮರುಳು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇದು ಏನಾಗುತ್ತದೆ ಎಂದರೆ, ಸಾಮಾನ್ಯ ಜನತೆಗೆ ಇಂಥ ಒಂದು move ಏನಿದೆ ಇದರ ಅರ್ಥವಾಗುತ್ತಾ ಇಲ್ಲ. ನಮ್ಮಂಥವರಿಗೇ ಇದು ಕಾರ್ಯತಃ ಹೇಗೆ ನಡೆಯು ತ್ತದೆಯೋ ಏನೋ, ಹೇಗೆ ಸಾಧ್ಯ ಎಂಬುದನ್ನು ಯೋಚನೆಮಾಡಿ, ಮಾಡಿ, ನನಗಂತೂ ಇದ್ದ ಸ್ವಲ್ಪ ಬುದ್ಧಿ ಎಲ್ಲಾ ಖರ್ಚಾಯಿತು. ಇದು ಒಂದು ಹುಡು ಗಾಟಿಕೆಯ ಮಾತು. ಸಾಮಾನ್ಯ ಜನ ಈ ಮಾತು ಹೇಳಿದ್ದರೆ ಏನೋ ಸುಮ್ಮನೆ ಇದ್ದುಬಿಡಬಹು ದಾಗಿತ್ತು. ಇಂಡಿಯಾ ದೇಶದ ಮುಖ್ಯ ಮಂತ್ರಿ ಗಳಾಗಿರತಕ್ಕವರು, ಕಾಂಗ್ರೆಸ್ ಪಕ್ಷದ ಜವಾಬ್ದಾರಿ ಹೊತ್ತಿರತಕ್ಕವರು ಎಂದರೆ ದೇಶದ ಪ್ರಾತಿನಿಧ್ಯ ಸ್ವರೂಪ ಪಡೆದಿರತಕ್ಕವರು, ಅವರು ಈ ರೀತಿ ಯಾವುದೋ ಒಂದು ಬಹಳ ಕ್ಷುಲ್ಲಕ ವಿಷಯ ತೆಗೆದು ಕೊಂಡು ಅದರಿಂದ ಉದ್ಧಾರವಾಗುತ್ತದೆ ಎಂದು ಹೇಳಿದರೆ ಸಾಮಾನ್ಯವಾಗಿ ಅವರ ಅನುಯಾಯಿಗಳು ಹಿಂಬಾಲಿಸಿಯೇ ಹಿಂಬಾಲಿಸುತ್ತಾರೆ. ಒಂದು ಉದಾಹರಣೆ ಕೊಡುವುದಾದರೆ, ತಮ್ಮ ಕಾಂಗ್ರೆಸ್ ಪಕ್ಷ ಒಂದು ಸಲ ಪಾರ್ಲಿಮೆಂಟ್‌ನಲ್ಲಿ ಮತ್ತು ಆವಡಿ ಯಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಇರಬೇಕೆಂದು ಒಪ್ಪಿಕೊಂಡಿತು. ಅದನ್ನು ವಿಚಾರ ಮಾಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅದರ ಬಗ್ಗೆ ಯಾವ ಚರ್ಚೆಯೂ ಆಗಲಿಲ್ಲ. ಆವಡಿಯಲ್ಲಿ ಸ್ವಲ್ಪ ಚರ್ಚೆ ಆಯಿತು. ಪಾರ್ಲಿಮೆಂಟಿನಲ್ಲಿ ನೆಹರೂರವರಿಗೆ ಇಷ್ಟಬಂದಿದೆ, ಅವರು ಸೋಷಿಯಲಿಸ್ಟಿಕ್ 'ಪ್ಯಾಟ್ರನ್ ಇರಬೇಕೆಂದು ಅನ್ನುತ್ತಾರೆ ಇರಲಿ' ಎಂದು ಒಪ್ಪಿಕೊಂಡುಬಿಟ್ಟರು. ಅದನ್ನೇ ಐಡಿಯಲ್ ಆಗಿ ಇಟ್ಟುಕೊಂಡಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂಥ ಒಂದು ಭಾವನೆ ಯನ್ನು ದೇಶದ ಮುಂದೆ ಇಟ್ಟಿರುವುದರಿಂದ ಇದು ಪ್ರಜಾ ಪ್ರಭುತ್ವ ತತ್ವಕ್ಕೇ ಸಂಪೂರ್ಣ ತಿಲಾಂಜಲಿಯನ್ನು ಕೊಟ್ಟಂತೆ. ನಮ್ಮ ವಿಧಾನ ಸಭೆಯನ್ನು ತೆಗೆದು ಕೊಳ್ಳೋಣ. ಈ ಎಸ್ಸಾರ್ಸಿ ಕಮಿಷನ್ ರಿಪೋರ್ಟ್ ಬಗ್ಗೆ ಯಾರ್ಯಾರು ಎಂಥೆಂಥ ದೊಡ್ಡ ಮಾತನಾಡಿ ದರು. ಶ್ರೀ ರಾಮಚಂದ್ರರಾಯರು ಆ ವರದಿಯನ್ನು ಕಸದ ಬುಟ್ಟಿಗೆ ಹಾಕಬೇಕೆಂದು ಹೇಳಿದ್ದಕ್ಕೆ ಶ್ರೀಮಾನ್ ಮರಿಯಪ್ಪನವರು ಮಾತನಾಡುತ್ತಾ ಅದು ತಪ್ಪು, ಮಹಾ ವ್ಯಕ್ತಿಗಳು ಮೂರು ಜನ ಸೇರಿ ಮಾಡಿರುವ ಈ ವರದಿ ಬಹಳ ಮಹತ್ವವುಳ್ಳದ್ದು ಎಂದೆಲ್ಲಾ ಹೇಳಿ ದರು. ಚರ್ಚೆ ಆಯಿತು. ಒಂದು ತೀರ್ಮಾನ ಕೂಡ ಆಯಿತು. ಆ ತೀರ್ಮಾನಕ್ಕೆ ಈಗ ಪಾರ್ಲಿಮೆಂಟು ಜೀವಂತವಾಗಿ ಇದೆ, ಪಾರ್ಲಿಮೆಂಟು ಎಲ್ಲಾ ಅಧಿಕಾರ ವನ್ನೂ ಹೊಂದಿರತಕ್ಕ, ದೇಶದಲ್ಲಿರತಕ್ಕ ಜನರ ಪ್ರತಿನಿಧಿ ಸ್ವರೂಪದ ಒಂದು ಸಭೆ; ಅದು ಇದೆ. ದೇಶದಲ್ಲಿ ಅನೇಕ ಶಾಸನ ಸಭೆಗಳು ಇವೆ ಮತ್ತು ಅನೇಕ ರೀತಿಯ ಅಭಿಪ್ರಾಯಗಳು ಇವೆ. ಇವುಗಳನ್ನೆಲ್ಲಾ ಮೂಲೆಗೆ ಒತ್ತಿ ಒಂದು ಸರ್ವಾಧಿಕಾರ ಮನೋ ಭಾವದ ತೀರ್ಮಾನವನ್ನು ದೇಶ ಒಪ್ಪಿಕೊಳ್ಳಲೇಬೇಕು, ಗತ್ಯಂತರವೇ ಇಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಟಿ. ಮರಿಯಪ್ಪ.—ಯಾರೂ ಹೇಳಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಂತೂ ಒಪ್ಪಿಸು ವುದಕ್ಕೆ ಹೋಗಿ ಒಪ್ಪಿಗೆ ಆಗದೇ ಬಿಟ್ಟಿದ್ದಾರೆ. ಈ

ಮನೋಭಾವ ದೇಶದ ಪ್ರಗತಿಗೆ ತುಂಬ ಹಾನಿಯನ್ನು ತರತಕ್ಕ ಮನೋಭಾವ. ಇದು ಯಾರಲ್ಲೇ ಇದ್ದರೂ ಅದನ್ನು ಬಿಟ್ಟುಕೊಟ್ಟು ಜನತೆಯ ಅಭಿಪ್ರಾಯದಂತೆ ಮಾಡುವುದು ಒಳಿತು. ಜನತೆ ಒಂದುವೇಳೆ ತಪ್ಪುಮಾಡಬಹುದು, ಈಗ ಮುಂಬೈಯನ್ನು ಮಹಾರಾಷ್ಟ್ರಕ್ಕೆ ಕೊಟ್ಟರೆ ತಪ್ಪಾಗುತ್ತದೆ ಎಂದು ಜನತೆ ತಿಳಿದುಕೊಳ್ಳಬಹುದು, ತಪ್ಪಾದರೆ ಅದನ್ನು ಸರಿಪಡಿಸುವುದಕ್ಕೆ ಆಗುತ್ತದೆ. ಹಿಂದೆ ಚರ್ಚಿಲ್‌ರವರು 'ನಿಮ್ಮ ದೇಶವನ್ನು ನೀವೇ ಆಳಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರೋ ಹೇಳಿ ಕೊಟ್ಟಿದ್ದಾರೆ. ಕೇಳುತ್ತೀರಿ ನೀವೇ ಇಚ್ಛೆಪಟ್ಟರೂ ಬಿಟ್ಟುಕೊಡುವುದಿಲ್ಲ' ಎಂದು ಬಹಳ ಸಲ ಹೇಳಿದರು. ಆಟ್ಲಿಯವರು ಸ್ವಾತಂತ್ರ್ಯ ಕೊಟ್ಟಮೇಲೂ ಅದೇ ಹೇಳಿದರು. ಇವೊತ್ತು ಇವರೂ ಅದನ್ನೇ ಹೇಳುತ್ತಾ ಇದ್ದಾರೆ.

ಹೀಗೆ ಜನರಿಗೆ ಸಂಬಂಧಪಟ್ಟ ವಿಷಯವನ್ನು ತೀರ್ಮಾನ ಮಾಡುವುದಕ್ಕೆ ಅವರಿಗೇ ಅವಕಾಶವಿರಬೇಕೇ ಹೊರತು, ಅವರ ಅಭಿಪ್ರಾಯಕ್ಕೆ ಹೆಚ್ಚು ಮಾನ್ಯತೆ ಇರಬೇಕೇ ಹೊರತು, ಅನ್ಯಥಾ ಆಗಬಾರದು; ನಾನು ಬುದ್ಧಿವಂತನಿರಬಹುದು, ನನ್ನ ಅಭಿಪ್ರಾಯದಿಂದ ಬಹುಶಃ ಹೆಚ್ಚಿನ ಉಪಯೋಗ ದೇಶದಲ್ಲಿ ಯಾರಿಗೋ ಆಗಬಹುದು, ಅದು ಬೇರೆ ಪ್ರಶ್ನೆ. ಆದ್ದರಿಂದ ಈ ವಿಷಯದಲ್ಲಿ ಈ ಎಸ್ಸಾರ್ಸಿ ರಿಪೋರ್ಟನ್ನು ಪ್ರಾಮಾಣಿಕತೆಯಿಂದ ನೋಡಿ, ಯಾವ ಹೆಚ್ಚಿನ ಘರ್ಷಣೆಗೂ ಅವಕಾಶ ಕೊಡದಂತೆ, ಪ್ರದರ್ಶನಗಳಿಗೆ ಅವಕಾಶ ಕೊಡದಂತೆ, ನಡೆದುಕೊಳ್ಳಬೇಕಾದದ್ದು ಅತ್ಯಗತ್ಯ. ಅನುಕೂಲವಾದರೆ ತಮ್ಮ ಅಭಿಪ್ರಾಯ ಎಂದು ಹೇಳುವುದು, ಇಲ್ಲದೇ ಇದ್ದರೆ ನಮ್ಮ ಅಭಿಪ್ರಾಯವಲ್ಲ ಎಂದು ಹೇಳುವುದು, ಸರಿಯಲ್ಲ. ಏಕೆಂದರೆ ಒಂದು ಸ್ಥಾನವಾನದಲ್ಲಿದ್ದಮೇಲೆ ಒಂದು ಬಿಗಿ ಇರಬೇಕು, ಜವಾಬ್ದಾರಿ ಇರಬೇಕು.

2-30 P.M.

ಇದರಲ್ಲಿ ಎರಡು ಮೂರು ಅಭಿಪ್ರಾಯಗಳು ಹೇಗೆ ಬರುತ್ತವೆ? ಮನೆಯಲ್ಲಿ ಒಂದು ರೀತಿಯ ಅಭಿಪ್ರಾಯ; ಹೊರಗಡೆ ಬಂದಮೇಲೆ ಸಹ ಒಂದೇ ರೀತಿಯ ಅಭಿಪ್ರಾಯ ; ಬೇರೆಬೇರೆ ಅಭಿಪ್ರಾಯಗಳಿಲ್ಲ. ಸಾರ್ವಜನಿಕವಾಗಿ ಸ್ಪಷ್ಟವಾದ ಯಾವ ಅಭಿಪ್ರಾಯ ಬರುತ್ತದೆಯೋ ಅದು ನಮ್ಮ ಅಭಿಪ್ರಾಯ. ನಾಲ್ಕಾರು ಅಭಿಪ್ರಾಯಗಳಿರುವುದಕ್ಕೆ ಹೇಗೆ ಸಾಧ್ಯ?

ಆದುದರಿಂದ ಈ ರೀತಿ ದೇಶದ ಜನತೆಯಲ್ಲಿ ಈ ಒಂದು ಭೂತವನ್ನು ಎಬ್ಬಿಸಿ ಮತ್ತೆ ಅದೇ ಭೂತವನ್ನು ನಾವು ಹುಗಿಯುವುದಕ್ಕೆ ಹೊರಟಿದ್ದೇವೆ. ಅದು ಬಹಳ ಅಪಾಯಕಾರಿ. ಇಂತಹ ಸನ್ನಿವೇಶಗಳನ್ನು ದೇಶದಲ್ಲಿ ಉಂಟುಮಾಡುವುದರಿಂದ ಈಗಿರತಕ್ಕ ಸಮಸ್ಯೆಗಳನ್ನು ಬದಿಗೊತ್ತುವುದಕ್ಕೆ ಯಾರೂ ಪ್ರಯತ್ನ ಮಾಡಬಾರದು. ಆ ರೀತಿಯ ಪ್ರಯತ್ನ ನಡೆಯುವುದಾದರೆ ಅಥವಾ ಇಂಥ ಒಂದು ಅಸಂಭವವಾದ ತೀರ್ಮಾನಗಳನ್ನು ದೇಶದ ಜನತೆಯಮೇಲೆ ಹೇರುವುದಕ್ಕೆ ಪ್ರಯತ್ನಪಟ್ಟರೆ ದೇಶದಲ್ಲಿ ದಂಗೆಯಾಗುತ್ತದೆ. ದೇಶದ ಜನ ಅಂಥ ಸರ್ಕಾರಗಳ ವಿರುದ್ಧ—ಬರೀ ಮೊರಾರ್ಜಿ ಸರ್ಕಾರದ ವಿರುದ್ಧವಲ್ಲ, ಇಂಡಿಯಾ ಸರ್ಕಾರದ ವಿರುದ್ಧ ಸಹ—ದಂಗೆ ಎದ್ದರೆ ತಪ್ಪಾಗುವುದಿಲ್ಲ. ಅನಂತರ ಪಶ್ಚಾತ್ತಾಪ ಪಡುವುದಕ್ಕೆ ಬದಲಾಗಿ ಅಪಾಯಕಾರೀ ಶಕ್ತಿಗಳು ಬೆಳೆಯುವುದಕ್ಕೆ ಅವಕಾಶ ಕೊಡದೆ ಜನತೆಯ ತೀರ್ಮಾನದಂತೆ, ಜನತೆಯ ಅಭಿಪ್ರಾಯದಂತೆ ನಡೆಸಿಕೊಂಡು ಹೋಗುವುದು ಸೂಕ್ತ. ಆದುದರಿಂದ ಈ ವಿಷಯದಲ್ಲಿ ನಾವು ಭಾಷಾವಾರು ಆಧಾರದಮೇಲೆ ಪ್ರಾಂತಗಳನ್ನು ರಚನೆಮಾಡಬೇಕೆಂದು ಯಾವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆಯೋ ಅದೇರೀತಿ ಕರ್ಣಾಟಕ ಪ್ರಾಂತರಚನೆಯಾಗಬೇಕು, ಬೊಂಬಾಯಿಯನ್ನೊಳಗೊಂಡ ಮಹಾರಾಷ್ಟ್ರಪ್ರಾಂತ ರಚನೆಯಾಗಬೇಕು. ಹೀಗೆ ಭಾಷೆಯ ಆಧಾರದಮೇಲೆ ಪ್ರಾಂತಗಳನ್ನು ರಚನೆ ಮಾಡಬೇಕು ಎಂಬುದನ್ನು ಅತಿಶೀಘ್ರವಾಗಿ ಸರ್ಕಾರದವರು ನೆರವೇರಿಸುವುದಕ್ಕೆ ಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಂಡು ಈ ಕಾರ್ಯವನ್ನು ನೆರವೇರಿಸಬೇಕು. ಇದರಲ್ಲಿ ಕಾಲವಿಳಂಬ ಮಾಡುವುದಕ್ಕೆ ಹೆಚ್ಚು ಅವಕಾಶವಿಲ್ಲವೆಂದು ಹೇಳಿ, ಈ ನನ್ನ ಅಭಿಪ್ರಾಯವನ್ನು ಸಭೆಯಮುಂದೆ ಇಡುತ್ತೇನೆ.

ಇನ್ನು ಭಾಷಣದಲ್ಲಿ ಪ್ರಸ್ತಾಪಮಾಡಿದ ಮತ್ತೊಂದು ಮಹಾವಿಷಯದಮೇಲೆ ಅಂದರೆ ಪಾಂಚವಾರ್ಷಿಕ ಯೋಜನೆಯಿಂದ ದೇಶದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯಾಗಿದೆ ಎಂಬ . . . .

Mr. SPEAKER.—The Hon'ble Member need not cover all the points. He has got other occasions. He can now speak on the amendments only.

ಶ್ರೀ ಎಸ್. ಗೋಪಾಲಗೌಡ.—Statement is incorrect, far from truth ಎಂದು ಹೇಳುತ್ತೇನೆ. ಯಾಕೆಂದರೆ ಸರ್ವತೋಮುಖವಾದ ಅಭಿವೃದ್ಧಿಯಾಗಿದೆ ಎಂದು, ಅವರು ಹೇಳಿದರೆ, ನಾನು ಯಾವ ರೀತಿಯಲ್ಲೂ ಅಭಿವೃದ್ಧಿಯಾಗಿಲ್ಲವೆಂದು ಹೇಳುತ್ತೇನೆ. ದೇಶದಲ್ಲಿ ಮತ್ತಷ್ಟು ಹೀನಸ್ಥಿತಿ ಉಂಟಾಗಿದೆ ಎಂದು ಹೇಳಿದರೆ ಸಾಕು ಎಂದು ಕಾಣುತ್ತದೆ.

ಇವೊತ್ತಿನ ದಿವಸ ಯೋಜನೆಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರದ ಉತ್ಪತ್ತಿ ಶೇಕಡ 18ರಷ್ಟು ಹೆಚ್ಚಿದೆ. ಎರಡನೆ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ ಸುಮಾರು ಶೇಕಡ 25ರಷ್ಟು ರಾಷ್ಟ್ರದ ಆದಾಯ ಹೆಚ್ಚಾಗುತ್ತದೆ ಎಂದು ಸಾಮಾನ್ಯವಾದ ಅಂದಾಜು ನಡೆದಿದೆ. ಆದರೆ ನನಗೆ ತಿಳಿದಿರುವ ಪ್ರಕಾರ, ಒಂದು ವಿಪರ್ಯಾಸ ಕಂಡು ಬರುತ್ತಿದೆ. ದಿನೇದಿನೇ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಬರೀ ಪಟ್ಟಣಗಳಲ್ಲಿ ಮಾತ್ರವಲ್ಲ, ಹಳ್ಳಿಗಳಲ್ಲಿ ಕೂಡ ನಿರುದ್ಯೋಗ ತಾಂಡವವಾಡುತ್ತಿದೆ. ಈ ನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಏನೇನು ಕೆಲಸಗಳನ್ನು ಕೈಗೊಂಡಿದ್ದಾರೆ ಎನ್ನುವುದನ್ನು ನಾವು ಪರಿಶೀಲನೆ ಮಾಡಿದರೆ ಇದರಲ್ಲಿ ಅವರು ಹೇಳುವುದೇನೆಂದರೆ, "ಕೆಲವು ಕೈಗಾರಿಕೆಗಳನ್ನು ನಾವು ಕೈಗೊಂಡಿದ್ದೇವೆ. ಗುಡಿಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಗಮನ ಕೊಡುತ್ತೇವೆ. ಇದರ ಮುಖಾಂತರ ನಾವು ಜನರಿಗೆ ಕೆಲಸವನ್ನು ಕೊಡುತ್ತೇವೆ." ಎಂದು ಡ್ರಾಫ್ಟ್ ಪ್ಲಾನ್‌ನಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ನಾನೂ ಮತ್ತು ನಮ್ಮ ಪಾರ್ಟಿಯವರೂ ನೋಡುವ ದೃಷ್ಟಿಯೇ ಬೇರೆ. ಆ ದೃಷ್ಟಿಯಂತೆ socialistic pattern ಎಂಬ ಒಂದು ಧ್ಯೇಯವನ್ನು ಒಪ್ಪಿಕೊಂಡರೂ ಕೂಡ ಇವೊತ್ತು ಶ್ರೀಮಾನ್ ಗುಲ್ಜಾರಿಲಾಲ್‌ನಂದರವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಪ್ಲಾನಿಂಗ್ ಕಮಿಷನ್ ಸಭೆಯವರು ಅವುಗಳನ್ನು ಪೂರ್ಣವಾಗಿ ಒಪ್ಪಿಕೊಂಡಿಲ್ಲ. ಯಾವ ಯಾವ ಉತ್ಪತ್ತಿ ಸಾಧನಗಳಿವೆಯೋ ಅವುಗಳನ್ನೆಲ್ಲ ಮೊದಲು ರಾಷ್ಟ್ರೀಕರಣ ಮಾಡಿಕೊಳ್ಳಬೇಕು, ಅವನ್ನು ಕ್ರಮವಾಗಿ ಸಮಾಜದ ಹಿಡಿತಕ್ಕೆ ಒಳಪಡಿಸಬೇಕು ಎಂದು ಒಂದು ಅಭಿಪ್ರಾಯ. ಸಮಾಜಕ್ಕೆ ಅದರಿಂದ

(ಶ್ರೀ ಎಸ್. ಗೋಪಾಲಗೌಡ.)

ಅನುಕೂಲವಾಗಬೇಕು ಎಂಬುದು ಇನ್ನೊಂದು. ಇದಕ್ಕೆ ತದ್ವಿರುದ್ಧವಾದ ಅಭಿಪ್ರಾಯಗಳೂ ಅಲ್ಲಿವೆ.

ಶ್ರೀ ಟಿ. ಮರಿಯಪ್ಪ.—ನ್ಯಾಷನಲೈಸೇಷನ್ ಆಗಬೇಕೇ, ಸೋಷಿಯಲೈಸೇಷನ್ ಆಗಬೇಕೇ ಯಾವುದಾಗಬೇಕೆಂದು ಹೇಳುತ್ತೀರಿ ?

ಶ್ರೀ ಎಸ್. ಗೋಪಾಲಗೌಡ.—ರಾಷ್ಟ್ರೀಕರಣ ಮಾಡಿಬಿಟ್ಟ ಮಾತ್ರಕ್ಕೇ ಏನೂ ಆಗುವುದಿಲ್ಲ. ಅದರಲ್ಲಿಯೂ, ರಾಷ್ಟ್ರೀಕರಣ ಮಾಡತಕ್ಕ ಯೋಜನೆಯ ಬಗ್ಗೆ ಕೂಡ ಪ್ರೈವೇಟ್ ಸೆಕ್ಟರ್ ಮತ್ತು ಪಬ್ಲಿಕ್ ಸೆಕ್ಟರಿಗೆ, ಅವರಲ್ಲಿಯೇ ಬಹಳ ಭಿನ್ನಾಭಿಪ್ರಾಯಗಳಿವೆ. ಕೈಗಾರಿಕಾಮಂತ್ರಿಗಳು ಒಂದು ಹೇಳುತ್ತಾರೆ, ಆರ್ಥಿಕ ಮಂತ್ರಿಗಳು ಒಂದು ಹೇಳುತ್ತಾರೆ. ಈ ಯೋಜನೆಗಾಗಿ ಕರೆದುತಂದ ಶ್ರೀಮಾನ್ ಮಹಾಲನ ಬೋಯಿಸ್ ರವರ ಅಭಿಪ್ರಾಯ ಬೇರೆ ಇದೆ. ಕೆಲಸ ಮಾತ್ರ ಏನೂ ಆಗುತ್ತಿಲ್ಲ. ಎಲ್ಲಾ stand still . . . .

Mr. SPEAKER.—This can be discussed in detail during the discussion on the Second Five-Year Plan.

ಶ್ರೀ ಎಸ್. ಗೋಪಾಲಗೌಡ.—ಯಾವ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು ಎಂದು, ಶ್ರೀಮಾನ್ ವೀರಪ್ಪನವರು ಯೋಜನೆಯ ವಿಷಯದಲ್ಲಿ ಗುಂಭವಾಗಿ ಹೇಳಿದ್ದಾರೆ. ಶ್ರೀಮಾನ್ ವೀರಪ್ಪನವರ ಯೋಜನೆಯ ಹಿಂದುಗಡೆ ಇರುವುದು rural industrialisation. ಈಗ ನಮ್ಮ ಮುಂದೆ ಎರಡನೆ ಪಂಚವಾರ್ಷಿಕ ಯೋಜನೆಯು ಕರಡು ಇದೆ. ಅದರಲ್ಲಿರತಕ್ಕ ಯೋಜನೆಗಳು ಯಾವರೀತಿಯಲ್ಲಿಯೂ ಹೆಚ್ಚಿನ ಒಂದು ಉದ್ಯೋಗವನ್ನು ದೊರಕಿಸಿಕೊಡುವುದಿಲ್ಲವೆನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ಅವು ಹೆಚ್ಚು ಜನರನ್ನು ಉದ್ಯೋಗಕ್ಕೆ ನಿಯೋಜಿಸತಕ್ಕ ಯೋಜನೆಗಳಲ್ಲ; ಈಗಿರತಕ್ಕ ವ್ಯವಸ್ಥೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿ ಕೆಲವು ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಒಂದು ಸಣ್ಣ ಪ್ರಯತ್ನಮಾತ್ರ. ಅದರಲ್ಲಿಯೂ ಕೂಡ ಮಾಡಿರತಕ್ಕ ಪ್ರಯತ್ನ ಸ್ವಲ್ಪ ಮಟ್ಟಿಗಾದರೂ ಪ್ರಗತಿಯನ್ನು ಸಾಧಿಸಿಲ್ಲ. ಅದಕ್ಕೆ ಅನೇಕ ಉದಾಹರಣೆಗಳಿವೆ.

ಶ್ರೀಮಾನ್ ವಿಶ್ವೇಶ್ವರಯ್ಯನವರ ಸ್ಕೀಂ ನಮ್ಮ ಸಂಸ್ಥಾನದಲ್ಲಿ ಜಾರಿಯಲ್ಲಿದೆ. ಅದರಪ್ರಕಾರ ರಚನೆ ಮಾಡಿರುವ ರೂರಲ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳು ಎರಡುವರ್ಷಗಳಾದರೂ ಷೇರು ಭರ್ತಿ ಮಾಡಿಸಿವೆಯೇ ಹೊರತು ಬೇರೆ ಯಾವ ಕೆಲಸವನ್ನೂ ಮಾಡಿಲ್ಲ. ಅವು ಸಾಲ ಕೊಡುವ ಮಟ್ಟಿಗೆ ಆಗಿಲ್ಲ. ಬರೀ preparationನಲ್ಲಿ ಕಾಲ ಕಳೆದುಹೋಗುತ್ತಿದೆ. ಅದರಬಗ್ಗೆ ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ರೀತಿ ಕಾಗದದ ಮೇಲೆ ಯೋಜನೆಗಳನ್ನು ಹಾಕಿಬಿಟ್ಟು ದೇಶದ ಹಣವನ್ನು ಸಾವಿರಗಟ್ಟಲೆ, ಕೋಟಿಗಟ್ಟಲೆ ಖರ್ಚುಮಾಡತಕ್ಕದ್ದು ಬಹಳ ಅನ್ಯಾಯ. ಇದನ್ನು ತಡೆಗಟ್ಟಬೇಕು ಎಂದು ಹೇಳುತ್ತೇನೆ.

ಇನ್ನು ಜಿಲ್ಲಾಬೋರ್ಡುಗಳ ವಿಷಯದಲ್ಲಿ ಶ್ರೀಮಾನ್ ಇಮಾಂಸಾಹೇಬರು ಜಿಲ್ಲಾಬೋರ್ಡುಗಳ ರಚನೆ ಮಾಡದೆ ಇದ್ದುದು ಯಾವ ಕಾರಣದಿಂದ ಎಂದು ಕೇಳಿದ್ದಾರೆ. ಇವೊತ್ತು ಹಳ್ಳಿಗಳ ರಸ್ತೆಗಳನ್ನು ಮತ್ತು ಮೊದಲು ಜಿಲ್ಲಾಬೋರ್ಡು ಏನೇನು ಕೆಲಸಗಳನ್ನು ನಡೆಸುತ್ತಿತ್ತೋ ಆ ವಿಷಯದಲ್ಲಿ ಹೇಳುವವರೂ, ಕೇಳುವವರೂ, ಯಾರೂ ಇಲ್ಲದಂತಾಗಿದೆ. ಜಿಲ್ಲಾಧಿಕಾರಿಗಳು ಆ ಕೆಲಸಗಳಿಗೆ ಜವಾಬ್ದಾರರಾಗಿದ್ದರೂ ಕೂಡ ಅವರಿಗೆ ಇರುವ ಒಂದು ಕಡೆ ಮ್ಯಾಜಿಸ್ಟ್ರೇಟ್ ಕೆಲಸ, ಇನ್ನೊಂದುಕಡೆ ಇತರ ಇಲಾಖೆಗಳ ಜವಾಬ್ದಾರಿ ಹೊತ್ತುಕೊಂಡಿರುವುದು, ಹೀಗಾಗಿ ಜಿಲ್ಲಾ ಬೋರ್ಡು ಕೆಲಸವನ್ನು ಅವರು ನೋಡಿಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಅವರು ಸರ್ಕಾರಿ ನೌಕರರಾಗಿರುವುದರಿಂದ ತಮಗೆ ಒಪ್ಪಿಸುವ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದು ಹೇಗೆ ಎಂದು ಈ ಕೆಲಸವನ್ನು ಒಪ್ಪಿಕೊಂಡಿದ್ದಾರೆಯೇ ಹೊರತು ಕೆಲಸಗಳು ಕಾರ್ಯತಃ ಏನೂ ನಡೆಯುವುದಕ್ಕೆ ಸಾಧ್ಯವಿಲ್ಲ. ಹಿಂದೆ ಜಿಲ್ಲಾ ಬೋರ್ಡುಗಳನ್ನು ವಜಾಮಾಡಬೇಕು ಎಂದು ಸರ್ಕಾರದವರು ಹೇಳಿದಾಗ ತಕ್ಷಣ ಹೊಸ ಚುನಾವಣೆಗಳನ್ನು ಮಾಡಲು ಏರ್ಪಾಡು ಮಾಡಿ, ಅನಂತರ ಬೇಕಾದರೆ ಜಿಲ್ಲಾಬೋರ್ಡುಗಳನ್ನು ವಜಾ ಮಾಡುವ ವಿಷಯವನ್ನು ಆಲೋಚನೆ ಮಾಡಬೇಕು ಎಂದು ಹೇಳಿದೆ. ಆದರೆ ಆವಾಗ ತಕ್ಷಣ ಚುನಾವಣೆಗಳನ್ನು ಏರ್ಪಾಡು ಮಾಡುತ್ತೇವೆ, ಈ ಒಂದು ಮಸೂದೆಯಾಗಲಿ, ಏನೇನೋ ತೊಂದರೆಗಳಿವೆಯಾದ್ದರಿಂದ ಈಗ ಜಿಲ್ಲಾಬೋರ್ಡುಗಳನ್ನು ವಜಾ ಮಾಡಬೇಕಾಗಿದೆ ಎಂದು ಒಂದು ನೆಪವನ್ನು ಹೇಳಿ ಅವೊತ್ತು ಮಸೂದೆಯನ್ನು ಮಾಡಿದರು. ಆದರೆ ಇಷ್ಟು ವರ್ಷಗಳಾದರೂ ಯಾವ ರೀತಿಯಲ್ಲಿಯೂ ಅವರು ತಮ್ಮ ಕೆಲಸವನ್ನು ನಿರ್ವಹಿಸಿಲ್ಲವೆಂದು ತಿಳಿದುಕೊಳ್ಳಬೇಕಾಗಿದೆ.

ಇನ್ನು ಹಳ್ಳಿ ಜನರ ಸಾಲದ ಬಗ್ಗೆ ಮಾರಿಟೋರಿಯಂ ತರಬೇಕು . ಎಂದು ಒತ್ತಾಯಮಾಡುತ್ತಿದ್ದೆವು. ಶ್ರೀಮಾನ್ ನಾಗನಗೌಡರು ತಮ್ಮ ಮದರಾಸು ಪ್ರಾಂತದ ಅನುಭವವನ್ನು ಹೇಳುತ್ತ ಮಾರಿಟೋರಿಯಂ ತರುವುದರಿಂದ ಜನರು ಬಹಳ ಕಷ್ಟಕ್ಕೆ ಸಿಕ್ಕುತ್ತಾರೆ, ರೈತರಿಗೆ ಸಾಲವೇ ಸಿಕ್ಕುವುದಿಲ್ಲ, ಅದನ್ನು ತರದೇ ಇರುವುದು ಸಾಧುವಾದದ್ದು ಎಂದು ಹೇಳಿದರು. ಅಂತೂ ಹಾಗೆಯೇ ಉಳಿದಿದೆ. ರೈತರಿಗೆ 22 ಕೋಟಿ ರೂಪಾಯಿಗಳ ಸಾಲದ ಹೊರೆ ಇದೆ ಎಂದು ಅವರೇ ಹೇಳಿದರು. ಇದರಿಂದ ಈಗ ಹಳ್ಳಿಗಳಲ್ಲಿ ತೀರದೇ ಇರತಕ್ಕ ಸಾಲಗಳು ಬಹಳ ಇರುತ್ತವೆ. ಒಬ್ಬ ರೈತ 100 ರೂಪಾಯಿ ಸಾಲವನ್ನು ತೆಗೆದುಕೊಂಡರೆ ವರ್ಷಕ್ಕೆ 12½ ರೂಪಾಯಿಗಳ ಬಡ್ಡಿ ಕೊಡಬೇಕು.

Sri A. V. NARASIMHA REDDY.—I rise to a point of order, Sir. As you know, my friend Sri Gopala Gowda never confines himself to the subject before the House and that has been taking away much of the valuable time of the House. This has made so many members to lose their chances or opportunities to speak on the subject while moving the amendments. He goes into great detail about events that will occur here, in his taluk, in the country and in the whole world. I do not know how all of them will be relevant to the subject under discussion and oftentimes . . . .

Sri S. GOPALA GOWDA.—He is making some allegations against me, Sir, it is no point of order.

Sri A. V. NARASIMHA REDDY.—That it is not relevant to the subject is the point of order I am raising.

Mr. SPEAKER.—The point he is speaking about is relevant because he is moving amendments to the main motion.

ಶ್ರೀ ಎಸ್. ಗೋಪಾಲಗೌಡ.—ಹಳ್ಳಿಗಳಲ್ಲಿ 100 ರೂಪಾಯಿ ಸಾಲವನ್ನು ತೆಗೆದುಕೊಂಡರೆ, ಈಗಿರುವ ಆರ್ಥಿಕ ಪರಿಸ್ಥಿತಿಯಲ್ಲಿ, ರೈತನು ವರ್ಷಕ್ಕೆ 12½ ರೂಪಾಯಿ ಕೊಟ್ಟೇಕೊಡಬೇಕು. ಅವನು ಸಾಯುವ ತನಕ ವರ್ಷಕ್ಕೆ 12½ ರೂಪಾಯಿಗಳಂತೆ ಕೊಟ್ಟರೂ ಸಾಲತೀರುವುದಿಲ್ಲ. ಆದ್ದರಿಂದ ಇಂತಹ ಸಾಲಗಳಿಗೆ ಮಾರಿಟೋರಿಯಂ ವ್ಯವಸ್ಥೆ ಮಾಡಿ ಅವನ ಸಾಲವನ್ನು ಕೆಲವು ಕಾಲ ಹಿಡಿದಿಟ್ಟು ಸ್ವಲ್ಪಮಟ್ಟಿಗೆ ಅವನ ಆರ್ಥಿಕ ಪರಿಸ್ಥಿತಿ ಉತ್ತಮವಾದ ಮೇಲೆ ಹಣಕೊಡುವ ಹಾಗೆ ಮಾಡಿದಹೊರತು ಹಳ್ಳಿಗಾಡಿನಲ್ಲಿ ಬಡವರಮೇಲೆ ಇರುವ ಸಾಲದ ಹೊರೆ ಕಡಿಮೆಯಾಗುವುದಿಲ್ಲ. ಅದನ್ನಲ್ಲದೆ ಬರೀ ಯಾವ ಯೋಜನೆಗಳನ್ನು ಮಾಡಿದರೂ ಅವು ಶ್ಮಶಾನ ಯೋಜನೆಗಳಾಗುತ್ತವೆಯೇ ಹೊರತು ಉದ್ಧಾರದ ಯೋಜನೆಗಳಾಗುವುದಿಲ್ಲ. ಆದುದರಿಂದ ಸರ್ಕಾರದವರು ಯೋಜನೆಗಳನ್ನು ಕೈಗೊಳ್ಳುವಾಗ, ದೇಶದ ಪ್ರಗತಿಯನ್ನು ಸಾಧಿಸುವುದಕ್ಕೆ ಹೊರಡುವಾಗ ಕೆಲವು ಮೂಲಭೂತವಾದ ವಿಷಯಗಳನ್ನು ಪರಿಶೀಲನೆ ಮಾಡಿ ಅವುಗಳಿಗೆ ಹೆಚ್ಚು ಗಮನ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಅಂಥ ರೀತಿಯಲ್ಲಿ ಸರ್ಕಾರ ದವರು ತಮ್ಮ ಕರ್ತವ್ಯವನ್ನು ನಿರ್ವಹಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಅವರು ಮೊದಲು ಆಗಬೇಕಾದ ಕೆಲಸಗಳನ್ನು ಮಾಡಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ನಮ್ಮ ರಾಜಪ್ರಮುಖರವರು ಈಗ ಬಹಳ ಶೀಘ್ರವಾಗಿ ನಮ್ಮ ಮನಸ್ಸನ್ನು ಸೆಳೆಯುವಂಥ ಬಹು ಮುಖ್ಯವಾದ ಮೂರುನಾಲ್ಕು ವಿಷಯಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಈ ರೀತಿ ಅಗತ್ಯವಾಗಿ ನಾವು ಯೋಚನೆಮಾಡಬೇಕಾಗಿರತಕ್ಕ ಈ ವಿಷಯಗಳನ್ನು ಅವರು ಪ್ರಸ್ತಾಪಮಾಡಿ ಆ ವಿಚಾರದಲ್ಲಿ ನಮ್ಮ ಅಭಿಪ್ರಾಯಗಳನ್ನು ಸೂಚಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ ಮತ್ತು ಅವರ ಭಾಷಣವನ್ನು ಸ್ವಾಗತಿಸುತ್ತೇನೆ. ಅವರು ಪ್ರಸ್ತಾಪ ಮಾಡಿರತಕ್ಕ ವಿಷಯಗಳಲ್ಲಿ ಬಹಳ ಮುಖ್ಯವಾಗಿ ಈಗ ನಮ್ಮೆಲ್ಲರ ಮನಸ್ಸನ್ನೂ ಸೆಳೆದಿರತಕ್ಕ ವಿಷಯವು ಪ್ರಾಂತಗಳ ಪುನರ್ವಿಂಗಡಣೆ ವಿಚಾರವೇ ಆಗಿದೆ. ಈ ವಿಚಾರವನ್ನು ಹಿಂದೆಯೂ ಅವರು ಒಮ್ಮೆ ಪ್ರಸ್ತಾಪ ಮಾಡಿದ್ದರು. ಈಗ ಆ ಸಂಬಂಧವಾಗಿ ಎದ್ದಿರುವಂಥ ವಿಷಯದ ವಿಚಾರವಾಗಿಯೂ ಸಹ ಅವರು ಪ್ರಸ್ತಾಪ ಮಾಡಿ ಯಾವ ವಿಧವಾದ ನಿರ್ದೇಶವನ್ನಾಗಲಿ ಅಥವಾ ಮುನ್ಸೂಚನೆಯನ್ನಾಗಲಿ ಕೊಡದೆ ನಾವು ವಿಚಾರ ವಿನಿಮಯಮಾಡಿ ಒಂದು ನಿರ್ಧಾರಕ್ಕೆ ಬರಲು ಅವಕಾಶ ಕೊಟ್ಟಿದ್ದಾರೆ. ಹಿಂದೆ ಅವರು ಪ್ರಸ್ತಾಪ ಮಾಡುವಾಗ ಭಾಷಾವಾರು ಪ್ರಾಂತಗಳನ್ನು ಮಾಡುವ ವಿಚಾರದಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದರು. ಈ ಸಂಬಂಧವಾಗಿ ಅನೇಕ ವಾದವಿವಾದಗಳೂ ಚರ್ಚೆಗಳೂ ನಡೆದು ಒಂದು ರೀತಿಯಾದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆ ತೀರ್ಮಾನದ ವಿಚಾರವಾಗಿ ನಮ್ಮ ಮಹಾರಾಜರು ಈ ರೀತಿಯಾಗಿ ಹೇಳಿದ್ದಾರೆ:—

> "The decision so taken by you has, I am aware, occasioned some dissatisfaction in the State. But, on the whole, the people in general have welcomed the expansion of the State."

ಹೀಗೆ ಹೇಳುವಾಗ ಈ ನಿರ್ಧಾರ ತೆಗೆದುಕೊಂಡಾಗ ನಮ್ಮ ಮೈಸೂರು ಸಂಸ್ಥಾನದ ಬಹು ಭಾಗದ ಜನಗಳು ಅದಕ್ಕೆ ತಮ್ಮ ಒಪ್ಪಿಗೆಯುಳ್ಳವರಾಗಿದ್ದರು ಎಂದು ವ್ಯಕ್ತಪಡಿಸಿದ್ದಾರೆ. ಈ ವಿಚಾರದಲ್ಲಿ ಮಾತ್ರ ನಾನು ವಿಧಿಯಿಲ್ಲದೆ ಟೀಕೆ ಮಾಡಬೇಕಾಗಿದೆ. ಬಹುಮತದ ಅಭಿಪ್ರಾಯದಿಂದ ಇದೇ ಸಭೆಯಲ್ಲಿ ಒಂದು ನಿರ್ಧಾರವನ್ನೇನೋ ತೆಗೆದುಕೊಳ್ಳಲಾಯಿತು. ಆದರೆ ಆ ರೀತಿ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಮುನ್ನ ಯಾವ ಸನ್ನಿವೇಶ ಒದಗಿತ್ತು, ಯಾವ ರೀತಿಯಾದಂಥ ಒಂದು ಬಲೋದ್ಬಂಧನ ಒಂದು ನಿರ್ದೇಶ ರೂಪವಾಗಿ ಬಂದು ಅದು ತೀರ್ಮಾನವಾಯಿತು ಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಹಾಗೆ ಎಲ್ಲರ ಅಭಿಪ್ರಾಯವನ್ನೂ ಸ್ವತಂತ್ರವಾಗಿ ಸೂಚಿಸಲು ಅವಕಾಶವಿಲ್ಲದೆ ತೀರ್ಮಾನವಾಗಿರುವುದರಿಂದ ದೇಶದ ಬಹು ಭಾಗದ ಜನಗಳ ಅಭಿಪ್ರಾಯ ಅದಕ್ಕೆ ಅನುಕೂಲವಾಗಿತ್ತೆಂದು ಹೇಳತಕ್ಕ ಮಾತು ಸರಿಯಲ್ಲವೆಂದು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಪ್ರಸ್ತಾಪ ಮಾಡಿ ಅವರು ಈಗ ಉದ್ಭವಿಸಿರತಕ್ಕ ಈಗ ನಮ್ಮನ್ನು ಸೆಳೆದಿರತಕ್ಕ ಬೈಲಿಂಗ್ವಲ್ ಅಥವಾ ಮಲ್ಟಿಲಿಂಗ್ವಲ್ ಪ್ರಾಂತಗಳ ವಿಚಾರವಾಗಿ ಪ್ರಸ್ತಾಪ ಮಾಡಿ ಎಲ್ಲರೂ ದೇಶದ ಹಿತವನ್ನೇ ತಮ್ಮ ಗಮನದಲ್ಲಿಟ್ಟು ದೇಶಭಕ್ತರಾಗಿ ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶೆ ಮಾಡಬೇಕಾದ ಅಗತ್ಯವಿದೆ ಎಂದು ಹೇಳಿದ್ದಾರೆ. ಇದು ಸಹಜವಾಗಿಯೂ ಅವರು ವಿಶಾಲ ಮನೋಭಾವನೆಯಿಂದ ಹೇಳಿರತಕ್ಕ ಮಾತು, ಇದನ್ನು ನಾವು ಸ್ವಾಗತಿಸಲೇಬೇಕಾಗಿದೆ. ಎಸ್. ಆರ್. ಸಿ. ವರದಿಯ ಮೇಲೆ ಕೆಲವು ಪ್ರದೇಶಗಳ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಒಂದು ನಿರ್ಧಾರವನ್ನು ತೆಗೆದುಕೊಂಡುದರ ಫಲವಾಗಿ ದೇಶದಾದ್ಯಂತ ಯಾವ ರೀತಿಯಾದಂಥ ಗಲಭೆಗಳು ನಡೆದುವು, ವಿರೋಧಾಭಿಪ್ರಾಯಗಳೇನು ಸೂಚಿಸಲ್ಪಟ್ಟವು ಎಂಬುದು ನಮ್ಮೆಲ್ಲರಿಗೂ ಗೊತ್ತೇ ಇದೆ. ಕೆಲವರು ಬೊಂಬಾಯಿ ಪಟ್ಟಣದಲ್ಲಿ ನಡೆದಂಥ ಘಟನೆಯನ್ನು ಮಾತ್ರ ಗಮನಿಸಿ ಹೊಸ ವ್ಯವಸ್ಥೆಯನ್ನು ಯೋಜಿಸಿದ್ದಾರೆಂದು ಹೇಳುತ್ತಿದ್ದಾರೆ. ಖಂಡಿತವಾಗಿಯೂ ಕೇವಲ ಬೊಂಬಾಯಿನಲ್ಲಿ ನಡೆದ ಗಲಭೆಗಳಿಗಾಗಿ ಮಾತ್ರ ನಮ್ಮ ನಾಯಕರು ಬೇರೆ ಸಲಹೆಯನ್ನು ನಮ್ಮ ಮುಂದಿಡುತ್ತಿಲ್ಲ. ಇಡೀ ದೇಶಾದ್ಯಂತ ಈ ವಿಚಾರದಲ್ಲಿ ಅಸಮಾಧಾನ ಮತ್ತು ಅಸಹಾಕಾರ ಎಲ್ಲ ಕಡೆಯಲ್ಲೂ ತೋರುತ್ತಿದೆ. ನಮ್ಮ ಮೈಸೂರು ದೇಶದಲ್ಲೂ ಸಹ ಬಹು ಭಾಗದ ಜನ ಆ ರೀತಿಯಾದ ವರ್ತನೆ ನಡೆಸಿ ಪ್ರಾಂತವಿಂಗಡಣೆಗೆ ವಿರೋಧವಾಗಿದ್ದುದು ತಮ್ಮೆಲ್ಲರಿಗೂ ಗೊತ್ತೇ ಇದೆ. ಇದೇ ರೀತಿ ಎಲ್ಲ ಪ್ರಾಂತ್ಯಗಳಲ್ಲೂ, ಯು. ಪಿ. ಒಂದನ್ನು ಬಿಟ್ಟು ಎಲ್ಲ ಕಡೆಯಲ್ಲೂ ಅಸಮಾಧಾನವಿತ್ತು. ಇದೆಲ್ಲವನ್ನೂ ನಮ್ಮ ಕೇಂದ್ರ ಸರ್ಕಾರದ ನಾಯಕರು ತುಲನ ಮಾಡಿ ತಾವಿಟ್ಟಿದ್ದ ಹೆಜ್ಜೆ ತಪ್ಪು ಮಾರ್ಗದಲ್ಲೋ ಏನೋ ಎಂದು ಪುನಃ ಯೋಚನೆ

(ಶ್ರೀ ಕೆ. ಲಕ್ಕಪ್ಪ.)

ಮಾಡಿ ಅದಕ್ಕಿಂತಲೂ ಉತ್ತಮವಾದ ಯಾವುದಾದರೂ ವ್ಯವಸ್ಥೆ ಮಾಡುವುದಕ್ಕೆ ಅವಕಾಶವಿದ್ದರೆ ಮಾಡೋಣ ಎಂದು ಯೋಚಿಸಿ ಈ ವಿಚಾರದಲ್ಲಿ ನಮ್ಮ ಮುಂದೆ ಇನ್ನೊಂದು ಪ್ರಶ್ನೆಯನ್ನಿಟ್ಟಿದ್ದಾರೆ. ಕೇವಲ ಭಾಷೆಗಳ ಆಧಾರದ ಮೇಲೆ ದೇಶವನ್ನು ವಿಂಗಡಣೆ ಮಾಡುವುದರಿಂದ ಭಾಷಾ ವ್ಯಾಮೋಹ ಜನಗಳಲ್ಲಿ ಹೆಚ್ಚಾಗಿ ಉಂಟಾಗಿ ಅದರಿಂದ ದೇಶದ ಐಕ್ಯತೆಗೆ ಮತ್ತು ಭದ್ರತೆಗೆ ಬಹಳ ಅಪಾಯವಿದೆ ಎಂಬುದನ್ನು ಅವರು ಅರಿತುಕೊಂಡು ಈಗಲೇ ಇದನ್ನು ಸರಿಯಾದ ರೀತಿಯಲ್ಲಿ ಹೋಗಲಾಡಿಸಿ ಇಡೀ ದೇಶದ ಐಕ್ಯತೆ ಮತ್ತು ಭದ್ರತೆಯನ್ನು ಉಳಿಸಬೇಕು ಎಂಬ ದೃಷ್ಟಿಯಿಂದ ಚೆನ್ನಾಗಿ ಪರಿಶೀಲಿಸಿ ದ್ವಿಭಾಷಾ ಪ್ರಾಂತಗಳನ್ನು ಮಾಡುವುದು ಸೂಕ್ತವೆಂದು ಅವರು ಭಾವಿಸುತ್ತಿದ್ದಾರೆ. ಈ ದ್ವಿಭಾಷಾ ಪ್ರಾಂತಗಳನ್ನು ಮಾಡುವ ಸೂಕ್ತಾ ಸೂಕ್ತತೆಯನ್ನು ವಿಚಾರ ಮಾಡಿ ನನ್ನ ಮಿತ್ರರನೇಕರು ಈ ಭಾವನೆಯನ್ನು ತಮ್ಮ ಘನತೆಗೆ ಮೀರಿ ಅಲ್ಲಗಳೆದಿದ್ದಾರೆ. ಅದು ಅವರ ಘನತೆಗೆ ತಕ್ಕುದಲ್ಲ, ಯೋಗ್ಯವಲ್ಲ ಎಂದು ಹೇಳುತ್ತೇನೆ. ಶ್ರೀ ಭೀಮಪ್ಪನಾಯಕರು ಮಾತನಾಡುತ್ತಾ ಇದು ಲೈಟ್ ಹಾರ್ಟೆಡ್ ಆಗಿ ಮಾಡಿದ್ದಾರೆಂದು ಹೇಳಿದರು. ಹುಡುಗಾಟಿಕೆ ಎಂಬುದಕ್ಕೆ ಎಷ್ಟು ಅರ್ಥವಿದೆಯೋ ಅವರು ಉಪಯೋಗಿಸಿರುವ ಪದಕ್ಕೂ ಅಷ್ಟೇ ಅರ್ಥವಿದೆಯೆಂದು ಭಾವಿಸಬಹುದು. ಆದರೆ ಜಾಗ್ರತೆ, ಲೈಟ್ ಹಾರ್ಟೆಡ್ಡಾಗಿ, ಯೋಚನೆ ಮಾಡದೆ, ಒಂದು ಅಭಿಪ್ರಾಯ ಸೂಚಿಸಿರುವುದಿಲ್ಲ. ಇಡೀ ನಮ್ಮ ದೇಶದ ಯಾವ ನಾಯಕರಿದ್ದಾರೋ ಅವರೆಲ್ಲಾ ಅಮೃತಸರದಲ್ಲಿ ಸೇರಿ ದೇಶದ ಮೂಲೆ ಮೂಲೆಗಳಿಂದ ಪ್ರತಿನಿಧಿಗಳು ಹೋಗಿ ಸಹಸ್ರಾರು ಜನ ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದಿರುವ ವಿಚಾರದಲ್ಲಿ ಇಷ್ಟು ಲಘುವಾಗಿ ಹೇಳುವುದು ಬಹಳ ವಿಷಾದಕರ. ನೆಹ್ರೂರವರು ಬೈಲಿಂಗ್ವಲ್ ಪ್ರಾಂತವಾಗಬೇಕೆಂದು ಈಚೆಗೆ ಸೂಚನೆ ಕೊಡುವುದಕ್ಕೆ ಅನೇಕ ಪ್ರಬಲವಾದ ಕಾರಣಗಳಿವೆ. ಅವರು ಬೈಲಿಂಗ್ವಲ್ ಪ್ರಾಂತವಾಗಬೇಕೆಂದು ಹೇಳುವ ಸಂದರ್ಭದಲ್ಲಿ ಅದನ್ನು ಸಕಾರಣವಾಗಿ ಜನರ ಮುಂದಿಟ್ಟಿದ್ದಾರೆ. ಅವರು ಹಾಗೆ ಹೇಳುವಾಗ ಇಡೀ ದೇಶದ ರಕ್ಷಣೆಯನ್ನು, ಇಡೀ ದೇಶದ ಭದ್ರತೆಯನ್ನು ಗಮನದಲ್ಲಿಟ್ಟು ಈ ಪ್ರಸ್ತಾಪವನ್ನೆತ್ತಿದ್ದಾರೆ. ನಮ್ಮ ಹಿಂದೂಸ್ಥಾನದ ಚರಿತ್ರೆಯನ್ನು ನಾವು ನೆನೆದುಕೊಂಡರೆ ಅದು ಅರ್ಥವಾಗುತ್ತದೆ. ನಮ್ಮ ಇಂಡಿಯಾ ದೇಶಕ್ಕೆ ಹೊರದೇಶಗಳಿಂದ ಬಂದು ನಮ್ಮ ಹಿಂದೂ ದೇಶವನ್ನು ಗೆದ್ದು ನಮ್ಮನ್ನು ಇಲ್ಲಿ ಗುಲಾಮರನ್ನಾಗಿಟ್ಟ ಎಲ್ಲ ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳ ಚರಿತ್ರೆಯನ್ನೂ ನೆನದುಕೊಂಡರೆ ಅವರೆಲ್ಲರೂ ಇಂಡಿಯಾ ದೇಶದ ದಕ್ಷಿಣದ ಸಮುದ್ರತೀರದ ಮೂಲಕ ಇಂಡಿಯಾ ದೇಶಕ್ಕೆ ಪ್ರವೇಶ ಮಾಡಿ ನಮ್ಮ ದೇಶವನ್ನು ಅವರ ಸ್ವಾಧೀನಕ್ಕೆ ತೆಗೆದುಕೊಂಡರು, ನಮ್ಮ ಇಂಡಿಯಾದೇಶದ ತೀರಪ್ರದೇಶವನ್ನು ನಾವು ಬಹಳ ಭದ್ರವಾಗಿಡಬೇಕಾದ ಆವಶ್ಯಕತೆ ಬಹಳವಾಗಿದೆ, ಈ ದೃಷ್ಟಿಯಿಂದ ನಾವು ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ಮತ್ತು ನಮ್ಮ ಇಂಡಿಯಾ ದೇಶದ ಅತ್ಯಂತ ದಕ್ಷಿಣ ಭಾಗದಲ್ಲಿರುವ ಮಲಬಾರು ಮತ್ತು ಕೇರಳ ಪ್ರಾಂತದಲ್ಲಿ ಅಟಾಮಿಕ್ ಎನರ್ಜಿಯನ್ನು ತಯಾರಿಸುವುದಕ್ಕೆ ಅವಶ್ಯಕವಾಗಿರುವಂಥ ಯುರೇನಿಯಂ ಎಂಬವನ್ನು ಹೇರಳವಾಗಿ ಸಿಕ್ಕುವ ಪ್ರದೇಶವನ್ನು ನಮ್ಮ ಹಿಡಿತದಲ್ಲಿಟ್ಟುಕೊಳ್ಳದಿದ್ದರೆ ದೇಶಕ್ಕೆ ಬಹಳ ಅಪಾಯಕರ ಎಂದು ನಾನಾ ವಿಧವಾದ ಮಹತ್ವಪೂರಿತವಾದ ಕಾರಣಗಳಿಗಾಗಿ ಈ ದೇಶವನ್ನು ದೊಡ್ಡ ದೊಡ್ಡ ಪ್ರಾಂತಗಳಾಗಿ ವಿಂಗಡಿಸಬೇಕು, ಭದ್ರತೆ ಕಡಿಮೆಯಾಗಬಾರದು ಎಂಬ ದೃಷ್ಟಿಯಿಂದ ಯೋಚಿಸಿ ವ್ಯವಸ್ಥೆ ಮಾಡುತ್ತಿದ್ದಾರೆಯೇ ಹೊರತು ಶ್ರೀ ಭೀಮಪ್ಪನಾಯಕರು ಹೇಳಿದ ಹಾಗೆ ಲೈಟ್ ಹಾರ್ಟೆಡ್ಡಾಗಿ ಯೋಚಿಸುತ್ತಿಲ್ಲ ಎಂದು ನಾನು ಖಚಿತವಾಗಿ ಹೇಳುತ್ತೇನೆ. ಭಾಷಾವಾರು ಪ್ರಾಂತ ನಿರ್ಮಾಣ ಮಾಡಬೇಕೆಂಬ ಪ್ರಶ್ನೆ ದೇಶದಲ್ಲಿ ಬಂದ ಮೇಲೆ ಎಷ್ಟು ವಾದ ವಿವಾದ ನಡೆದಿದೆ, ಅದರಿಂದ ಎಷ್ಟು ಘರ್ಷಣೆಯಾಗಿದೆ, ಜನರ ಮನಸ್ಸು ಎಷ್ಟು ಕಲಕಿದೆ, ಅದರಿಂದ ದುಷ್ಪರಿಣಾಮವೇನಾಗುತ್ತಿದೆ ಎಂಬುದು ನಮಗಾಗಲೇ ಮನವರಿಕೆಯಾಗಿದೆ. ಈ ಭಾಷಾವ್ಯಾಮೋಹ ಜನರಲ್ಲಿ ಬಹಳವಾಗಿ ಜಾಸ್ತಿಯಾಗಿ ಅದರಿಂದ ಖಂಡಿತ ದೇಶಕ್ಕೆ ಅನರ್ಥವಾಗುವ ಸನ್ನಿವೇಶವಿದೆ. ಈ ದೃಷ್ಟಿಯಿಂದ ಮತ್ತು ನಮ್ಮ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವ ದೃಷ್ಟಿಯಿಂದ ದೊಡ್ಡ ದೊಡ್ಡ ಪ್ರಾಂತ ಮಾಡುವುದರ ಅಗತ್ಯ ಬಹಳವಾಗಿದೆ ಎಂಬುದು ಬಹು ಜನರ ಅಭಿಪ್ರಾಯವಾಗಿದೆ. ಈ ದೃಷ್ಟಿಯಿಂದ ದ್ವಿಭಾಷಾಪ್ರಾಂತ ಮಾಡುವುದು ಅಗತ್ಯವೆಂದು ನಮಗೆ ತೋರುತ್ತದೆ. ಹೀಗೆ ದ್ವಿಭಾಷಾ ಪ್ರಾಂತಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ ಅದು ಬಹು ಮುಖ್ಯ ಕಾರಣಗಳಿಗಾಗಿ. ನಮ್ಮ ವಿಶಾಲ ಮೈಸೂರು ವಿಶಾಲ ಆಂಧ್ರ ಇವೆರಡನ್ನೂ ಒಂದುಗೂಡಿಸಿದರೆ ಆಗ ನಮ್ಮ ಕೆಲಸ ಕಾರ್ಯ ಸುಸೂತ್ರವಾಗಿ ನಡೆಯುವುದಕ್ಕೆ ಒಂದು ಅವಕಾಶವಾಗಬಹುದು ಎಂದು ನನಗನ್ನಿಸುತ್ತದೆ.

3. P.M.

ಕಾರಣಾಂತರಗಳಿಂದ ಅದೂ ಕೂಡ ಸಾಧ್ಯವಾಗದೆ ಹೋದಪಕ್ಷದಲ್ಲಿ ಆ ಕೇರಳ ಪ್ರದೇಶವನ್ನಾದರೂ ನಮ್ಮ ಮೈಸೂರಿಗೆ ಸೇರಿಸಿಕೊಳ್ಳಬಹುದು. ಮದರಾಸಿನವರು ಹಾಗೊಂದುವೇಳೆ ಆ ಕೇರಳ ಪ್ರಾಂತ್ಯವನ್ನು ಸೇರಿಸಿಕೊಳ್ಳದ ಪಕ್ಷಕ್ಕೆ ನಾವೇ ಆ ಕೇರಳ ಪ್ರಾಂತ್ಯವನ್ನು ಸೇರಿಸಿಕೊಳ್ಳೋಣ. ಆದರೆ ಶ್ರೀ ಭಿಮಪ್ಪನಾಯಕರವರು ಮಾತನಾಡುತ್ತಾ ಕೆಲವು ಭೀತಿಯುತವಾದ ಅಂಶಗಳನ್ನು ವ್ಯಕ್ತಪಡಿಸಿದರು. ಆ ದೇಶದ ಜನರು ಎಲ್ಲಿ ತಮ್ಮ ಜಾಗವನ್ನೆಲ್ಲಾ ಆಕ್ರಮಿಸಿಕೊಂಡುಬಿಡುತ್ತಾರೋ ಎಂಬ ಒಂದು ದೊಡ್ಡ ಭೀತಿಯನ್ನು ವ್ಯಕ್ತಪಡಿಸಿದರು. ಮಲಬಾರಿನಲ್ಲೇನೋ ಜನಸಂಖ್ಯೆ ಜಾಸ್ತಿಯಿದೆ. ಈಗಾಗಲೇ ನಮಗೂ ಅವರಿಗೂ ಹೆಚ್ಚು ಹೆಚ್ಚು ಸಂಬಂಧ ಬೆಳೆಯುತ್ತಿದೆ. ಸುಮಾರು ಇಲ್ಲಿಗೆ ಹತ್ತು ವರ್ಷಗಳಿಂದೀಚೆಗೆ ಅವರು ನಮ್ಮ ಮೈಸೂರು ದೇಶದ ಅನೇಕ ಭಾಗಗಳಲ್ಲಿ ಬಂದು ನೆಲೆಸುತ್ತಿದ್ದಾರೆ. ಆ ನಮ್ಮ ಮಲೆಯಾಳಿ ಸಹೋದರರು ಈಗಾಗಲೇ ನಮ್ಮ ಹಾಸನ ಜಿಲ್ಲೆಯ ಅನೇಕ ಕಾಫಿತೋಟಗಳಲ್ಲಿ ಬಂದು ಇದ್ದುಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ನಮ್ಮ ಅಠಾರ ಕಛೇರಿಯ ಮುಂದೆ ಕೆಲಸ ನಡೆಯುತ್ತಿರುವ ಆ ವಿಧಾನಸೌಧ ಕಟ್ಟಡದ ಕೆಲಸವನ್ನು ತೆಗೆದುಕೊಂಡರೆ ಅದರಲ್ಲಿ ಆ ನಮ್ಮ ಮಲೆಯಾಳಿ ಸಹೋದರರೇ ಜಾಸ್ತಿಯಾಗಿರುತ್ತಾರೆ. ಅನೇಕ ಕೆರೆ ಕಾಂಗಾರಿಗಳಲ್ಲಿ ಇವರೇ ಇದ್ದಾರೆ. ಹೀಗೆ ಈಗಾಗಲೇ ಆ ನಮ್ಮ ಮಲೆಯಾಳಿ ಸಹೋದರರು ಮೈಸೂರಿನವರೊಂದಿಗೆ ಸೇರಿ ಸಹಕರಿಸಿ ಕೆಲಸ ಮಾಡುತ್ತಿದ್ದಾರೆ. ನಾವು ಈಗಲೇ ಅವರನ್ನೂ ನಮ್ಮ ಜೊತೆಗೆ ಸೇರಿಸಿಕೊಂಡರೆ ಒಳ್ಳೆಯದು. ಹಾಗೆ ನಾವು ಅವರನ್ನು ಸೇರಿಸಿಕೊಳ್ಳದೆ ಹೋದಪಕ್ಷದಲ್ಲಿ ನಮ್ಮ ರಾಜ್ಯಾಂಗ

ದಲ್ಲಿ ಹೇಳಿರುವಂತೆ ಅವರಾಗೇ ಬಂದು ಇಲ್ಲಿ ನೆಲಸುವುದಕ್ಕೆ ಪ್ರಯತ್ನಪಟ್ಟರೆ ನಾವು ಅವರನ್ನು ತಡೆಗಟ್ಟಲು ಸಾಧ್ಯವಿರುವುದಿಲ್ಲ. ಹಾಗೂ ಒಂದುವೇಳೆ ಈ ನಮ್ಮ ಮಲೆಯಾಳಿ ಸಹೋದರರನ್ನು ನಾವು ಸೇರಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುವ ಪಕ್ಷಕ್ಕೆ ನಾವು ಆ ಮಹರಾಷ್ಟ್ರದವರನ್ನೇ ನಮ್ಮ ಮೈಸೂರಿಗೆ ಸೇರಿಸಿಕೊಳ್ಳೋಣ. ಏತಕ್ಕೆಂದರೆ ಈಗಾಗಲೇ ಮದರಾಸ್ ಪ್ರಾಂತ್ಯದ ಜನಸಂಖ್ಯೆ 3 ಕೋಟಿ ಇದೆ. ವಿಶಾಲಾಂಧ್ರವಾದರೆ ಆಗ ಅದರ ಜನ ಸಂಖ್ಯೆ ಕೂಡ 3-3½ ಕೋಟಿ ಆಗಬಹುದು. ಅದೇರೀತಿ ನಾವು ನಮ್ಮ ಮೈಸೂರಿಗೆ ಆ ಮಲಬಾರನ್ನು ಸೇರಿಸಿಕೊಂಡರೆ ಆಗ ನಮ್ಮ ಜನಸಂಖ್ಯೆಯೂ ಸಹ 3-3½ ಕೋಟಿಯಾಗುತ್ತದೆ. ದೇಶದ ರಕ್ಷಣೆಯ ಮತ್ತು ಐಕಮತ್ಯದ ದೃಷ್ಟಿಯಿಂದ ಈ ರೀತಿ ದ್ವಿಭಾಷಾ ಪ್ರಾಂತ್ಯವನ್ನು ರಚಿಸುವುದು ದೇಶಾಭ್ಯುದಯದ ದೃಷ್ಟಿಯಿಂದ ಬಹಳ ಒಳ್ಳೆಯದು. ಅಂಶಗಳನ್ನು ಹೆಚ್ಚಾಗಿ ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯ ಸಂಬಂಧದಲ್ಲಿ ಇದನ್ನು ಸ್ವಾಗತ ಮಾಡಬೇಕಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈ ಹಿಂದೆ ಇದೇ ಮಹನೀಯರು ಇದೇ ರಾಜ್ಯಗಳ ಪುನರ್ವಿಂಗಡಣೆಯ ವಿಚಾರವಾಗಿ ಮಾತನಾಡುತ್ತ ರಾಜ್ಯ ದೊಡ್ಡದಾದರೆ ದೇಶಾಭಿವೃದ್ಧಿಗೆ-ಆಡಳಿತ ಸೌಕರ್ಯಗಳಿಗೆ ತುಂಬ ಧಕ್ಕೆ ಬರುತ್ತದೆಂದು ಹೇಳಿದ್ದವರು ಈಗ ಏಕೆ ಹೀಗೆ ಹೇಳುತ್ತಿದ್ದಾರೆ ಅನ್ನುವುದನ್ನು ಸ್ವಲ್ಪ ವಿಮರ್ಶೆ ಮಾಡಿದರೆ ಒಳ್ಳೆಯದು.

ಶ್ರೀ ಕೆ. ಲಕ್ಕಪ್ಪ.—ಆದರೆ ಇಲ್ಲಿ ಈ ಪ್ರಥಮ ಪಾಂಚವಾರ್ಷಿಕ ಯೋಜನೆಯ ಸಂಬಂಧವಾಗಿ ಒಂದು ಮಾತು ಹೇಳಿದ್ದಾರೆ. ಅದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನರ ಪ್ರತಿನಿಧಿಯಾಗಿ ಬಂದಿರುವ ನನಗೆ ಬಹಳ ಮಟ್ಟಿಗೆ ಅನ್ವಯಿಸುವುದಾಗಿದೆ. ಅದು ಈ ದಿನಸಿಗಳ ಧಾರಣೆಗಳಿಗೆ ಸಂಬಂಧಪಟ್ಟ ವಿಚಾರವಾಗಿದೆ. ಈ ವಿಚಾರವನ್ನು ಶ್ರೀಮರ್ ಮಹಾರಾಜರವರು ಪ್ರಸ್ತಾಪ ಮಾಡುತ್ತಾ ನಮ್ಮ ಸರ್ಕಾರ ರೈತನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಅಥವಾ ರೈತರಿಗೆ ಯಾವ ಅನಾನುಕೂಲವೂ ಆಗದೆ ಇರತಕ್ಕಂಥ ರೀತಿಯಲ್ಲಿ ಈ ಧಾರಣವಾಸಿಗಳನ್ನು ನಿಗದಿ ಮಾಡುವುದಾಗಿ ಹೇಳಿದ್ದಾರೆ. ಈ ವಿಚಾರ ಈಗಾಗಲೇ ನಮ್ಮ ಮಿತ್ರರಿಗೆಲ್ಲಾ ಗೊತ್ತಾಗಿದೆ. ಈಗಾಗಲೇ ನಮ್ಮ ಸರ್ಕಾರದವರು ಒಂದು ಪಲ್ಲಾ ಭತ್ತಕ್ಕೆ ಹದಿಮೂರು ರೂಪಾಯಿ ಆರಾಣೆ ಬೆಲೆಯನ್ನು ನಿಗದಿ ಮಾಡಿದ್ದಾರೆ. ಆದರೆ ನಮ್ಮ ಸರ್ಕಾರದವರು ಹೀಗೆ ನಿಗದಿ ಮಾಡುವಾಗ ಈ ಬೆಲೆಯನ್ನು ಯಾವ ಆಧಾರದ ಮೇಲೆ ನಿಗದಿ ಮಾಡಿದ್ದಾರೆ ಎಂಬತಕ್ಕ ವಿಚಾರದಲ್ಲಿ ನನಗೆ ಸ್ವಲ್ಪ ಶಂಕೆಯುಂಟಾಗಿದೆ. ಹೀಗೆ ಒಂದು ಬೆಲೆಯನ್ನು ರೈತನು ಬೆಳೆಯತಕ್ಕ ಇನ್ನೂ ಅನೇಕ ವಸ್ತುಗಳಿಗೆ ನಿಗದಿಮಾಡದೆ ಹೋದರೆ ಆತನಿಗೆ ತುಂಬ ಅನಾನುಕೂಲವಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮಂತ್ರಿಗಳು).—ಅದೇನು ಒಂದು ಸೀಲಿಂಗ್ ಪ್ರೈಜ್ ಅಲ್ಲ. ಅದು ಕೇವಲ ಕೊಳ್ಳುವ ಒಂದು ಬೆಲೆ ಮಾತ್ರ.

ಶ್ರೀ ಕೆ. ಲಕ್ಕಪ್ಪ.—ಆದರೆ ಈ ಸೀಲಿಂಗ್ ಪ್ರೈಜನ್ನು ಹೀಗೆ ಸರ್ಕಾರದವರು ಬಹಳ ಕಡಿಮೆ ಮಾಡಿರುವುದರಿಂದ ಮಾರ್ಕೆಟ್ಟಿನಲ್ಲಿ ಇದರ ಬೆಲೆ ಒಂದು ಸ್ತಿಮಿತದಲ್ಲಿರಲು ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಇದರಿಂದ ಮಾರ್ಕೆಟ್ ಧಾರಣೆವಾಸಿಗಳಿಗೆ ಸ್ವಲ್ಪ ಅಡಚಣೆ ಬರುತ್ತದೆ. ಆದರೆ ನಮ್ಮ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ಈ ರೈತರನ್ನು ಅವರ ಆರ್ಥಿಕ ಮುಗ್ಗಟ್ಟಿನಿಂದ ರಕ್ಷಣೆ ಮಾಡಬೇಕೆಂಬ ಮನೋಭಿಲಾಷೆಯಿರುವುದರಿಂದ ಅವರು ಬೆಳೆಯತಕ್ಕ ಕೆಲವು ವಸ್ತುಗಳಿಗಾದರೂ ಒಂದು ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕಾದ್ದು ಒಳ್ಳೆಯದೆಂದೂ, ಈ ವಿಚಾರದಲ್ಲಿ ನಮ್ಮ ಸರ್ಕಾರದವರು ತೀವ್ರ ಗಮನ ಕೊಡುತ್ತಾರೆಂದೂ ನಾನು ಭಾವಿಸುತ್ತೇನೆ, ನಮ್ಮ ದೇಶದಲ್ಲಿ ರೈತರಿಗೆ ಮೂರುಕಾಸು ಸಂಪಾದನೆ ಆಗಬೇಕಾಗಿದ್ದರೆ ಕಬ್ಬಿನ ಬೆಳೆಯೊಂದರಲ್ಲಿ ಮಾತ್ರವೇ. ನಮ್ಮ ದೇಶದಲ್ಲಿ ನಾನಾ ಭಾಗದಲ್ಲಿ ರೈತರು ಕಬ್ಬನ್ನು ಬೆಳೆಯುತ್ತಿದ್ದಾರೆ. ಆದರೆ ಇತ್ತೀಚೆಗೆ ಈ ಕಬ್ಬಿನ ಬೆಳೆಗೆ ಸಾಕಷ್ಟು ಆದಾಯ ದೊರೆಯುತ್ತಿಲ್ಲ. ಬೆಲ್ಲದ ಧಾರಣೆ ಬಹಳವಾಗಿ ಇಳಿದುಹೋಗಿದೆ. ಇದರಿಂದ ರೈತನಿಗೆ ಬಹಳ ನಷ್ಟವಾಗುತ್ತಿದೆ. ತಾವು ಇವುಗಳಿಗೆ ಬೆಲೆಯನ್ನು ನಿಗದಿ ಮಾಡಿದರೆ ಅವರಿಗೆ ಮೂರುಕಾಸು ಸಿಕ್ಕುವಂತಾಗುತ್ತದೆ. ಅವರಿಗೆ ಒಂದು ಸರಿಯಾದ ಧಾರಣೆ ಸಿಕ್ಕುವಂತೆ ಮಾಡುವುದು ಒಳ್ಳೆಯದು ; ನಮ್ಮ ಸರ್ಕಾರದವರು ಹೀಗೆ ಮಾಡುತ್ತಾರೆಂದು ನಾನು ನಂಬಿದ್ದೇನೆ. ಆದರೆ ಇದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ನಮ್ಮ ಮಹಾರಾಜರವರು ದೇಶದ ವರಮಾನವು ಎಂದರೆ ನ್ಯಾಷನಲ್ ಇನ್‌ಕಂ ಶೇಕಡಾ 18 ರಷ್ಟು ಹೆಚ್ಚಾಗಿದೆಯೆಂದು ಹೇಳಿದ್ದಾರೆ. ಅದು ನಿಜ. ಮೈಸೂರಿನಲ್ಲೂ ಸ್ವಲ್ಪ ಹೆಚ್ಚುಕಡಿಮೆ ಇಷ್ಟೇ ವರಮಾನವಿರಬಹುದು. ಇನ್ನು ಮುಂದಕ್ಕೆ ದೇಶದಲ್ಲಿ ಇನ್ನೂ ದೊಡ್ಡ ದೊಡ್ಡ ಕೈಗಾರಿಕಾ ಕಾರ್ಖಾನೆಗಳನ್ನು ಏರ್ಪಾಡುಮಾಡುವ ಉದ್ದೇಶವಿರುವುದರಿಂದ ದೇಶದ ಉತ್ಪಾದನೆ ಜಾಸ್ತಿ ಆಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ,— ನಿಜ. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟು ರೈತರು ಸಾಲಗಾರರಾಗುತ್ತಿದ್ದಾರೆ. ಧಾರಣೆವಾಸಿಗಳು ಇಲ್ಲಿಗೆ ಎರಡು ವರ್ಷಗಳ ಹಿಂದೆ ರೈತರಿಗೆ ಕೊಂಚ ಅನುಕೂಲವಾಗಿದ್ದುವು. ಆಗ ಅವರು ತಮ್ಮ ಸಾಲ ಸೋಲಗಳನ್ನೆಲ್ಲಾ ತೀರಿಸಿಕೊಂಡಿದ್ದರು. ಆದರೆ ಇತ್ತೀಚೆಗೆ ಆ ಧಾರಣೆವಾಸಿಗಳು ಇಳಿದುಹೋದ ಪ್ರಯುಕ್ತ ಪುನಃ ರೈತರು ಈ ಋಣಬಾಧೆಗೆ ಹೆಚ್ಚು ಹೆಚ್ಚಾಗಿ ಸಿಕ್ಕಿ ನರಳುತ್ತಿದ್ದಾರೆಂದು ಕಂಡು ಬರುತ್ತಿದೆ. ಇದಕ್ಕಾಗಿ ಜಾಗ್ರತೆ ಒಂದು ಸರಿಯಾದ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಸೂಚಿಸುತ್ತೇನೆ.

ಕೊನೆಯದಾಗಿ ಹೊನ್ನೆಮರಡು ವಿದ್ಯುಚ್ಛಕ್ತಿ ಯೋಜನೆಗಾಗಿ 13 ಕೋಟಿ ರೂಪಾಯಿಗಳನ್ನು ಒದಗಿಸಿರುವುದಾಗಿಯೂ 7,10,000 ಕಿಲೋವಾಟ್ಸ್‌ಗಳಷ್ಟು ಪವರ್ ಉತ್ಪತ್ತಿಯಾಗುವುದಾಗಿಯೂ ತಿಳಿಸಿದ್ದಾರೆ. ದೇಶದಲ್ಲಿರುವ ಈ ಕೈಗಾರಿಕೆ ಮತ್ತು ವ್ಯವಸಾಯದ ಬಾಬುಗಳಿಗೆ ಈ ವಿದ್ಯುಚ್ಛಕ್ತಿಯನ್ನುಪಯೋಗಿಸಿದರೆ ಜನರಿಗೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿದ್ದಾರೆ—ಅದು ನಿಜ. ಇದರಿಂದ ದೇಶಕ್ಕೆ ಬಹಳ ಉಪಕಾರವಾಗುತ್ತದೆ. ಈ ಬಗ್ಗೆ ನಮ್ಮ ಸರ್ಕಾರ ಮೊದಲೇ ಆಲೋಚನೆಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದರೆ ಈ ದಿವಸ ನಮಗೆ ಎಷ್ಟೋ ತೊಂದರೆಗಳು ತಪ್ಪಿಹೋಗುತ್ತಿದ್ದುವು. ಆದರೆ ಇತ್ತೀಚೆಗೆ ಯಾವ ಕೈಗಾರಿಕೆಗಳಿಗೂ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ನಮ್ಮ ಸರ್ಕಾರದವರು ಮೊನ್ನೆತಾನೆ ಒಂದು ಸರ್ಕಾರಿ ಹುಕುಮನ್ನು ಹೊರಡಿಸಿದ್ದಾರೆಂದು ಕೇಳಿದೆನು. ಹೀಗೆ ಮಾಡಿದ್ದರಿಂದ ನಮ್ಮ ದೇಶದಲ್ಲಿ ಈ ಕೈಗಾರಿಕಾಭಿ

(ಶ್ರೀ ಕೆ. ಲಕ್ಕಪ್ಪ.)

ವೃದ್ಧಿಗೆ ಎಷ್ಟೊಂದು ತೊಂದರೆ ಉಂಟಾಯಿತು ಎಂಬು ದನ್ನು ನಾವು ಇದರಿಂದಲೇ ಊಹಿಸಬಹುದು. ಆದಾಗ್ಯೂ ನಮ್ಮ ಮೈಸೂರು ದೇಶವು ಈ ಕೈಗಾರಿ ಕಾಭಿವೃದ್ಧಿಯಲ್ಲಿ ಬಹಳ ಮುಂದೆ ಬಂದಿದೆ. ಈವರೆಗೂ ನಮ್ಮ ಸರ್ಕಾರದವರು ದೂರಾಲೋಚನೆ ಮಾಡದೆ ಈ ಹೊನ್ನೆಮರಡು ವಿದ್ಯುಚ್ಛಕ್ತಿ ಯೋಜನೆಯನ್ನು ಪ್ರಾರಂಭಿಸದಿರುವುದರಿಂದ ನಮ್ಮ ದೇಶಕ್ಕೆ ಅನೇಕ ತರಹೆಯಲ್ಲಿ ಧಕ್ಕೆ ಉಂಟಾಗಿದೆ; ಹಳೆ ಕೈಗಾರಿಕೆಗಳು ಬೆಳೆಯಲು ಸಾಧ್ಯವಾಗಿಲ್ಲ, ಹೊಸಕೈಗಾರಿಕೆಗಳನ್ನು ಇದರ ಅಭಾವದಿಂದ ಪ್ರಾರಂಭಿಸಲು ಸಾಧ್ಯವಾಗಿಲ್ಲ. ಹೀಗೆಲ್ಲಾ ತೊಂದರೆ ಉಂಟಾಗಿದೆ. ಇದನ್ನು ನಿವಾ ರಣೆ ಮಾಡಲು ಸರ್ಕಾರದವರು ಕೂಡಲೆ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಆ ಲಕ್ಕವಳ್ಳಿ ಜಲಾಶಯದ ಬಳಿ 25 ಸಾವಿರ ಕಿಲೋ ವಾಟ್ ಪವರನ್ನು ತಯಾರಿಸುವ ಅನುಕೂಲವಿದೆ. ಅದನ್ನೂ ಸಹ ಕೈಗೊಳ್ಳಬೇಕೆಂದು ಸುಚಿಸುತ್ತೇನೆ. ಈ ಹಿಂದೆ ಆ ಷಿಂಷಾ ವಿದ್ಯುತ್ ಕೇಂದ್ರದ ಬಡಾವಣೆ ಗೊಂದು ಯೋಜನೆಯನ್ನು ಹಾಕಿಕೊಂಡಿದ್ದರು. ಅದನ್ನೂ ಸಹ ಈಗ ಕೈಗೊಂಡು ಹೆಚ್ಚು ವಿದ್ಯುಚ್ಛಕ್ತಿ ಯನ್ನು ಉತ್ಪತ್ತಿ ಮಾಡಬೇಕೆಂದು ಹೇಳುತ್ತೇನೆ. ಬೆಂಗಳೂರು ಮೈಸೂರುಗಳಲ್ಲಿ ಸಹ ಟ್ರಾನ್ಸ್‌ಫಾರ್ಮರು ಗಳನ್ನು ಉಪಯೋಗಿಸಿ ಈ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ನೀಡಬೇಕೆಂದು ಹೇಳಿ ನಾನು ನನ್ನ ಭಾಷಣ ವನ್ನು ಮುಗಿಸುತ್ತೇನೆ.

MR. SPEAKER.—Now the House will rise and meet at 3-45.

The House adjourned for Lunch at Fifteen Minutes past Three of the Clock and reassembled at Forty-five Minutes past Three of the Clock.

[MR. SPEAKER in the Chair]

*ಶ್ರೀ ಎಸ್. ಸಿ. ನಾಗಯ್ಯರೆಡ್ಡಿ (ಗೋರಿಬಿದ ನೂರು).—ಸ್ವಾಮಿ, ನಾನು ಈ ಸಂದರ್ಭದಲ್ಲಿ ಮಾತ ನಾಡಕೂಡದು ಎಂದು ಇದ್ದೆ. ನಾನು ಈಗ್ಗೆ ಕೆಲವು ವರ್ಷಗಳಿಂದ ಲೆಜಿಸ್ಲೇಟಿವ್ ಅಸೆಂಬ್ಲಿ ಮತ್ತು ಲೆಜಿ ಸ್ಲೇಟಿವ್ ಕೌನ್ಸಿಲ್‌ನಲ್ಲಿ ಇದ್ದೇನೆ. ನಾನು ಯಾವಾಗ್ಯೂ ಯುದ್ಧಕಾಲ ಬಿಟ್ಟು ಬೇರೆ ಕಾಲದಲ್ಲಿ ಮಾತನಾಡಿದವನಲ್ಲ. ಆದರೆ ಈಗ ವಿಧಿ ಇಲ್ಲದೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಆದರೂ ಕೂಡ ನಾನು ಸಾಧ್ಯವಾದ ಮಟ್ಟಿಗೂ ಖಂಡಿತವಾಗಿಯೂ ಇನ್ನುಮುಂದೆ ಸ್ವಲ್ಪ ರೂಲಿಂಗ್ಸ್‌ಗೆ ಅವಕಾಶವಿಲ್ಲದಂತೆ ಮಾತನಾಡಬೇ ಕೆಂದು ಮಾಡಿದ್ದೇನೆ. ಅದು ನನ್ನ ಕೈಯಲ್ಲಿ ಇದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಿನ್ನೆ ಮುಖ್ಯ ಮಂತ್ರಿಗಳು ನಾನು ಯಾವಾಗಲೂ ಹೀಗೆಯೇ ಮಾತ ನಾಡುವುದು ಎಂದು ಹೇಳಿದರು. ನಿಜ, ಮಗಳು ಮಾಡಿದಹಾಗೆ ಜನರು ಆಡುವುದು ಸ್ವಾಭಾವಿಕ. ಮಗಳದು ಒಳ್ಳೆಯ ನಡತೆ ಇದ್ದರೆ ಜನರು ಏಕೆ ಆಡಿಕೊಳ್ಳುತ್ತಾರೆ? ಇವರು ಮಾಡುವ ಕೆಲಸ ಅಂಥಾದ್ದು, ದೇಶ ಆಡಿಕೊಳ್ಳುವುದೂ ಅಂಥಾದ್ದು. ನಾನು ರಾಜಪ್ರಮುಖರ ಭಾಷಣದಲ್ಲಿ ಮೂರು-ನಾಲ್ಕು ವಿಷಯಗಳನ್ನು ಎತ್ತಿ ಅದು ಹೇಗೆ 'ಮಗಳ ನಡತೆ' ಇದೆ ಎಂಬುದನ್ನು ತಮ್ಮ ಮುಂದೆ ಇಡಬೇಕೆಂದು ಇದ್ದೇನೆ.

ಈ ಪ್ರೈಸ್ ಕಾಂಪಿಟೀಷನ್ ಎನ್ನುವುದರ ಮೇಲೆ ಇಂಡಿಯಾ ಸರ್ಕಾರದವರು ಒಂದು ವರ್ಷದ ಕೆಳಗೆ ಆಕ್ಟ್ ಪಾಸ್ ಮಾಡಿದರು. ಹೋದ ಸಲ ನಮ್ಮ ಸರ್ಕಾರದವರು ಅದನ್ನು ಜಾರಿಗೆ ತರುವುದಕ್ಕೆ ಒಂದು ರೆಸಲ್ಯೂಷನ್ ತಂದರು. ಆ ಕಾಲದಲ್ಲಿ ಇದಕ್ಕೆ ಸಂಬಂಧಪಟ್ಟ ಆರ್. ಎಂ. ಡಿ. ಸಿ. ಯವರು ಅನೇಕ ಜನ ಮೆಂಬರುಗಳನ್ನು approach ಮಾಡಿ ಏನಾದರೂ ಮಾಡಿ ಆ ರೆಸಲ್ಯೂಷನ್ ವಾಪಸು ತೆಗೆಸಬೇಕೆಂದು ಪ್ರಯತ್ನಪಟ್ಟರು. ಅದು ಸಾಧ್ಯವಾಗಲಿಲ್ಲ. ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋದರು. ಅದನ್ನು ವಾಪಸು ತೆಗೆಸಿದರು. ಕಾರಣ ಏನು? ಸರ್ಕಾರ ರೆಸಲ್ಯೂಷನ್ ತಂದು ಅದನ್ನು ವಾಪಸು ಪಡೆಯಬೇಕೆಂದರೆ ಏನು ಸಕಾರಣ ಇತ್ತೋ ನನಗಂತೂ ಗೊತ್ತಿಲ್ಲ. ಬೇರೆ ಸಂಸ್ಥಾನದವರು ಎಂದರೆ ಆಂಧ್ರದವರು, ವ ದರಾಸಿ ನವರು ತಕ್ಷಣ ಆ ರೆಸಲ್ಯೂಷನ್ ಜಾರಿಗೆ ತಂದು ಆಕ್ಟನ್ನು ಜಾರಿಯಲ್ಲಿಟ್ಟುಕೊಂಡು ತಮ್ಮ ದೇಶದಲ್ಲಿ ಒಂದು ಸಬ್ ಕಮಿಟಿಯನ್ನು ಮಾಡಿ, ರೂಲ್ಸ್ ಫ್ರೇಂ ಮಾಡಿ, ತಕ್ಷಣ ಒಂದು ಸಾವಿರ ರೂಪಾಯಿನ ಕಾಂಪಿ ಟೀಷನಿಗೆ ಇಳಿಸಿ, ಪ್ರಜೆಗಳನ್ನು ಕಾಪಾಡಿದರು. ತಾವು ಅದನ್ನು ಮಾಡದೇ ಇದ್ದುದು ತಮ್ಮ ಕರ್ತವ್ಯ ಲೋಪವಾಗಲಿಲ್ಲವೇ ಎಂದು ನಾನುಕೇಳುತ್ತೇನೆ. ಬೇರೆ ಇನ್ನಾವುದೋಸರ್ಕಾರ ಆಗಿದ್ದರೆ ಖಂಡಿತವಾಗಿಯೂ ಅದು ಉಳಿಯುವುದಕ್ಕೆ ಅವಕಾಶವಿರಲಿಲ್ಲ. ಇದು ತಮ್ಮ ಡೆರಿಲಿಕ್ಷನ್ ಆಫ್ ಡ್ಯೂಟಿ ಆಗಲಿಲ್ಲವೇ? ಇದ ರಿಂದ ಎಷ್ಟೋ ಲಕ್ಷ ರೂಪಾಯಿ ದೇಶಕ್ಕೆ ಹೋಯಿತು. ಇದು ಒಂದನೆಯದು.

ಆಮೇಲೆ ಹಿಂದೆ ಒಂದು ಸಾರಿ, ಖಂಡಿತ ಹೇಳು ತ್ತೇನೆ, ಪ್ರೈವೇಟ್ ಮರ್ಡರ್ ಕೇಸನ್ನು ರೀಇನ್‌ವೆಸ್ಟಿ ಗೇಷನ್‌ಗೆ ಕೊಟ್ಟರು. ರೀ ಇನ್‌ವೆಸ್ಟಿಗೇಷನ್‌ಗೆ ಕೊಟ್ಟಾಗ ಅದು ದೇಶದಲ್ಲೆಲ್ಲಾ ಪೇಪರ್‌ನಲ್ಲಿ ಬಂತು. ಆರ್. ಎಂ. ಡಿ. ಸಿ. ಅವರು ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಅದು ಪರಿಶೀಲನೆಯಾಗುತ್ತಿದೆ ಎಂದಾಗ, ಚೀಫ್ ಮಿನಿಸ್ಟರ್‌ರವರು ಇಲ್ಲಿಂದ ನೇರವಾಗಿ ಬೊಂಬಾ ಯಿಗೆ ಹೋದರು. ಕಾರಣ ಏನಿತ್ತು? ಇಲ್ಲಿ ರೀ ಇನ್‌ವೆಸ್ಟಿಗೇಷನ್‌ಗೆ ಕೊಟ್ಟು, ನೇರವಾಗಿ ಬೊಂಬಾ ಯಿಗೆ ಹೋಗಿ, ಅಲ್ಲಿ ಸುಮ್ಮನೆ ಇದ್ದರೆ? ಇಲ್ಲ, ಆರ್. ಎಂ. ಡಿ. ಸಿ. ಯವರ ಆತಿಥ್ಯ ಸ್ವೀಕರಿಸಿದರು. ಅಲ್ಲಿನ ಬ್ಲಿಟ್ಸ್ ಮತ್ತು ಇತರ ಪತ್ರಿಕೆಗಳಲ್ಲಿ ಅವರ ಫೋಟೋ ಕೂಡ ಬಂತು. Head of the Department ಹೋಗಿ ಅವರ ಮನೆಯಲ್ಲಿ ಊಟ ಮಾಡಿ ಗ್ಲಾಸ್ ಹಿಡಿದುಕೊಂಡು—ಅದರಲ್ಲಿ ಹೆಂಡವೋ ಇನ್ನೇನೋ— ನಿಂತುಕೊಂಡಿರುವಂತೆ ಫೋಟೋ ಬಂತು. ಹಾಗೆ ನಿಂತುಕೊಂಡ ಫೋಟೋ ಎಂದರೆ ಪೋಲೀಸ್‌ನವರು ಇನ್‌ವೆಸ್ಟಿಗೇಷನ್ ಮಾಡುತ್ತಾರೆಯೇ? ಇಲ್ಲ. ಒಂದು ವೀಕ್ಲಿಯಲ್ಲಿ ಆತಿಥ್ಯ ಸ್ವೀಕರಿಸುತ್ತಾ ಇದ್ದಾಗ ನೋಟಿನ ಕಂತೆ ಮಿನಿಸ್ಟರವರಿಗೆ ಬಂದಹಾಗೆ ಕಾರ್ಟೂನ್ ಹಾಕಿದ್ದರು. ಅದನ್ನು ನಾನು ಹೋದ ಅಸೆಂಬ್ಲಿಯಲ್ಲಿ ಇಂಟರ್‌ಪೆಲೇಷನ್ ಮೂಲಕ ಮುಖ್ಯ ಮಂತ್ರಿಗಳ ಗಮ ನಕ್ಕೆ ತಂದು: 'ಏನು? ಇದರಲ್ಲಿ ಹೀಗೆ ನೋಟಿನ ಕಂತೆಯೇ ನಿಮ್ಮ ಮೇಲೆ ಬಂದಹಾಗೆ ಇದೆಯಲ್ಲಾ' ಪರಿಶೀಲನೆ ಮಾಡುತ್ತೀರಾ ಎಂದು ಹೇಳಿದರೂ ಕೂಡ ಪರಿಶೀಲನೆ ಮಾಡಲಿಲ್ಲ. ಈ ಸರ್ಕಾರದವರಿಗೆ ಎಷ್ಟು ಧೈರ್ಯ ಸ್ವಾಮಿ? ಹೋಗಲಿ ರೆಸಲ್ಯೂಷನನ್ನು ತರಲಿಲ್ಲವಲ್ಲ. ಲೈಸೆನ್ಸ್ ಎಕ್ಸ್‌ಪೈರ್ ಆಯಿತು,

ಅದನ್ನು ರಿನ್ಯೂ ಮಾಡಬಹುದೇ? ಯಾರನ್ನು ಕೇಳಿ ಮಾಡಿದರು? ಮಾಡಬಹುದು ಎಂದು ಯಾರು ಹೇಳಿದರು? ಇಂಥ ವಿಷಯಗಳನ್ನು ಹೇಳಿದರೆ ಡೀಸೆನ್ಸೀ, ಡೆಕೋರಂ, ಡಿಗ್ನಿಟಿ ಇಲ್ಲ ಎಂದು ಹೇಳುತ್ತಾರೆ. ಕರ್ತವ್ಯಲೋಪ ಯಾರುಮಾಡಿದ್ದಾರೆ, ದೇಶದ್ರೋಹ ಯಾರು ಮಾಡಿದ್ದಾರೆ, ತಾವೇ ಯೋಚನೆ ಮಾಡಿ. ಡೀಸೆನ್ಸಿ ಮೀರಿ ಯಾರು ಹೋಗಿದ್ದಾರೆ, ಸ್ವಾಮಿ? ಇದು ಎರಡನೆಯದು.

ಇನ್ನು ಹದಿನೈದು ರೂಪಾಯಿ ಬೆಟಿಂಗ್ ಟ್ಯಾಕ್ಸ್ ಇದ್ದರೆ ಇವರಿಗೆ ಏಕೆ ಹನ್ನೆರಡು ರೂಪಾಯಿ ಮಾಡಿದಿರಿ? ಯಾರನ್ನು ಕೇಳಿದಿರಿ? ಅಸೆಂಬ್ಲಿಯವರನ್ನು ಕೇಳಿದಿರಾ? ದೇಶವನ್ನು ಕೇಳಿದಿರಾ? ದೇಶಕ್ಕೆ ಇದರಿಂದ ಎಷ್ಟೋ ಕೋಟಿ ರೂಪಾಯಿ ನಷ್ಟವಾಯಿತು ಎಂದು ನಾನು ಹೇಳುತ್ತೇನೆ.

Mr. SPEAKER.—My I draw the attention of the Hon'ble Member that there is a Bill coming up before the House and when it comes he can speak on that?

ಶ್ರೀ ಎನ್. ಸಿ. ನಾಗಯ್ಯ ರೆಡ್ಡಿ.—ಬಿಲ್ ಅಲ್ಲ ರೆಸಲ್ಯೂಷನ್ ಬರುತ್ತದೆ.

ಅಧ್ಯಕ್ಷರು.—ಆಗಲೇ ಮಾತನಾಡಬಹುದು.

ಶ್ರೀ ಎನ್. ಸಿ. ನಾಗಯ್ಯ ರೆಡ್ಡಿ.—ಈಗಲೇ ಹೇಳಿಬಿಡುತ್ತೇನೆ. ಶ್ರೀಮನ್ಮಹಾರಾಜರವರು ಬಿಲ್‌ಗಳನ್ನು ಇಲ್ಲಿ ನಮೂದು ಮಾಡಿದ್ದಾರೆ. ಈಗಲೇ ಹೇಳುತ್ತೇನೆ.

ಇನ್ನು ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವುದು ಸ್ವಾಮಿ. ಚೀಫ್ ಮಿನಿಸ್ಟರವರು ಅಧಿಕಾರ ವಹಿಸಿದ್ದೇ ತಡ—ಊರಿನೊಳಗೆ ಯಾವುದಾದರೂ ದೇವತೆ ಬಂದರೆ ಘೋಷಣೆ ಮಾಡಿ ಚಾಟಿ ಹೊಡೆಯುವಂತೆ—ನೇರವಾಗಿ ಕೆ. ಜಿ. ಎಫ್. ಗೆ ಹೋದರು. ಬೇತಮಂಗಲದಲ್ಲಿ ಕ್ಯಾಂಪ್ ಮಾಡಿದರು. ಒಂದು ಕಮಿಟಿ ಮಾಡಿದರು. ಆಮೇಲೆ ಅಸೆಂಬ್ಲಿಯಲ್ಲಿ ಒಂದು ರೆಸಲ್ಯೂಷನ್ ಇಟ್ಟರು, ರೆಸಲ್ಯೂಷನ್ ಆಯಿತು. ಆ ಮೇಲೆ ಅಲ್ಲಿಂದ ದೊಡ್ಡ ದೊಡ್ಡ ಮನುಷ್ಯರೊಡನೆ ನೆಗೋಷಿಯೇಟ್ ಮಾಡುವುದಕ್ಕೆ ಹೋದರು. ಅವರ ಹೆಸರನ್ನು ಬೇಕಾದರೆ ಹೇಳುತ್ತೇನೆ. ಚೀಫ್ ಮಿನಿಸ್ಟರವರ ತಮ್ಮ ವಿ. ನಂಜಪ್ಪನವರನ್ನು ಅದಕ್ಕೆ ಉಪಯೋಗಿಸಿ ಕೊಂಡಿದ್ದಾರೆ. ಅವರು ಏಕೆ ಹೋಗಿದ್ದರು? ಏಕೆ ನೆಗೋಷಿಯೇಟ್ ಮಾಡಬೇಕು? ಏನು ಕಾರಣ ಇತ್ತು? ಅವರನ್ನು ಬೆದರಿಸುವುದಕ್ಕೋ ಏನೋ ಅರ್ಥವಾಗಲಿಲ್ಲ. ಆಮೇಲೆ ರಾಷ್ಟ್ರೀಕರಣ ಮಾಡಬೇಕು ಎಂದು ನಿರ್ಣಯ ಮಾಡಿದರು. ಹೋಗಲಿ, ಅದಕ್ಕೆ ಇಂಡಿಯಾ ಸರ್ಕಾರದವರು ಒಪ್ಪಿಗೆ ಕೊಟಿದ್ದಾರೆಯೇ? ಇಲ್ಲ. ಎಕ್ಸ್‌ಪರ್ಟ್ ಕಮಿಟಿ ಎಂದು ಮಾಡಿದ್ದರಲ್ಲ ಅವರು ರಾಷ್ಟ್ರೀಕರಣ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆಯೇ?

*Sri H. SIDDAVEERAPPA.—I cannot think that there is any basis or data for the Hon'ble Member to say that we have sent a negotiating committee and all that. May I respectfully say that is not correct, is not true to facts. As a matter of fact Government have never asked anybody to negotiate on their behalf. At any rate, I, as Minister in charge of the portfolio, can say and assure this Hon'ble House that at no time have we asked any private individual or individuals to negotiate on behalf of the Government nor there was any occasion to negotiate with those people.

A MEMBER.—Then it was a self-appointed committee.

ಶ್ರೀ ಎಚ್. ಸಿದ್ದವೀರಪ್ಪ.—ನೆಗೋಷಿಯೇಟ್ ಮಾಡುವುದಕ್ಕೆ ಯಾರನ್ನೂ ಕಳುಹಿಸಬೇಕಾದ ಪ್ರಮೇಯ ಬಂದಿಲ್ಲ. ಆ ರೀತಿ ಕಳುಹಿಸಿಲ್ಲ.

ಶ್ರೀ ಎನ್. ಸಿ. ನಾಗಯ್ಯ ರೆಡ್ಡಿ.—ನೀವು ಕಳುಹಿಸಿದ್ದೀರಿ ಎಂದು ನಾನು ಹೇಳಲಿಲ್ಲ. ಹೋಗಿರುವುದು ನಿಜ. ಏಕೆ ಹೋಗಬೇಕಾಗಿತ್ತು?

ಶ್ರೀ ಎಚ್. ಸಿದ್ದವೀರಪ್ಪ.—ನಮಗೆ ಗೊತ್ತಿಲ್ಲದೆ ಯಾರೋ ಹೋಗಿದ್ದರೆ, I am not going so far as to contradict all that the Hon'ble Member has said. So far as Government are concerned, we have not asked anybody to negotiate; we have not asked anybody to do anything for and on behalf of the Government.

ಶ್ರೀ ಎನ್. ಸಿ. ನಾಗಯ್ಯ ರೆಡ್ಡಿ.—ಇಲ್ಲ ರಾಷ್ಟ್ರೀಕರಣ ಮಾಡಬೇಕೆಂದು ನಿರ್ಣಯ ಆಯಿತು. ಇಂಡಿಯಾ ಸರ್ಕಾರದವರು ತಮ್ಮ ಒಪ್ಪಿಗೆ ಕೊಟ್ಟಿಲ್ಲ. ನೀವು ಕೇಳಿದರೆ ಹೇಳುವ ಹಾಗಿಲ್ಲ. ಈ ಸಂದರ್ಭದಲ್ಲಿ ಸುಮ್ಮನೆ ಬಿಲ್ಲಿನ ವಿಚಾರದಲ್ಲಿ: "It is being drawn" ಇನ್ನೂ ಬರೆಯುತ್ತಾ ಇದ್ದಾರೆ, and "My Government expect to introduce" ಎಂದರೆ ಏನು ಬರುತ್ತದೆಯೋ ಅದೆಲ್ಲಾ ನನಗೆ ಗೊತ್ತಿದೆ. ಹೇಗೆ adjust ಮಾಡಿದರೆ ವಿಷಯ ಸರಿ ಹೋಗುತ್ತದೆ ಎಂಬುದು ಒಂದು strategy.

Sri H. SIDDAVEERAPPA.—If my friend could give me time, if he would yield to me for three minutes, I can explain the position. The position is this. Why these words "My Government expect to place it before you at this session" are advisedly put in the Address probably requires a little explanation. So far as the legislative competence of this House is concerned, there is no doubt about that; they can introduce the Bill at any time and pass it into law. But since it comes under the Concurrent List, it is common knowledge that instead of approaching the President for assent after the Bill is passed, it would be much better if we consult him before. If I place in a chronological order the steps taken by this Government after the mandate was given, it will be very clear for anybody whether there is any lacuna on our part. For the simple reason that there is concurrent jurisdiction we have to proceed slowly but steadily. As a

(SRI H. SIDDAVEERAPPA.)

matter of fact, so far as the policy of nationalisation is concerned, any mandate given by this House is binding on me and on the Government.

ಶ್ರೀ ಎಸ್. ಸಿ. ನಾಗಯ್ಯ ರೆಡ್ಡಿ.—ಆದರೆ ಅಲ್ಲಿಗೂ ಅವರು ಹತ್ತಿರ ಬಂದಹಾಗೆ ನನಗೆ ತೋಚಲಿಲ್ಲ. ಈಗ ಅವರು "expect to introduce and pass the Bill" ಎಂದು ಹೇಳಿದ್ದಾರೆ. ಸ್ವಾಮಿ, ಇವರ ಬಿಲ್ಲಿಗೆ Centre ನವರು care ಮಾಡಬೇಕಲ್ಲ, ಅಲ್ಲಿ ಪ್ರೆಸಿಡೆಂಟರು ಒಪ್ಪಿಗೆ ಕೊಡಬೇಕಲ್ಲ, ಕೊಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಾನ್ಫಿಡೆನ್ಸ್ ಇದೆ.

ಶ್ರೀ ಎಸ್. ಸಿ. ನಾಗಯ್ಯ ರೆಡ್ಡಿ.—ನಿಮಗೂ ಗೊತ್ತು, ನಿಮ್ಮ ಬಿಲ್ಲು ಬುಟ್ಟಿಯೊಳಗೆ ಹೋಗುತ್ತದೆ ಎಂದು. Who cares for your Bill?

ಅಧ್ಯಕ್ಷರು.—ತಾವು ಏನು ಮಾಡಬೇಕೆಂದು ಹೇಳುತ್ತೀರೋ ಹೇಳಿ.

ಶ್ರೀ ಎಸ್. ಸಿ. ನಾಗಯ್ಯ ರೆಡ್ಡಿ.—ಎಲ್ಲಿ ಲಕ್ಷಾಂತರ ರೂಪಾಯಿ ಆಡಳಿತ ಸಿಕ್ಕುತ್ತದೆಯೋ. ಅಲ್ಲಿ ಕೈಹಾಕಬೇಕಾದರೆ ಜೋಕೆಯಿಂದಿರಬೇಕು, ಸ್ವಾಮಿ. ರಾಷ್ಟ್ರೀಕರಣ ಮಾಡಿ, rock burst ಆಯಿತು ಎಂದರೆ ಸರ್ಕಾರದವರು ಜವಾಬ್ದಾರಿ ಹೊತ್ತುಕೊಳ್ಳುತ್ತೀರಾ ? ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ: ಯಾವುದೋ ಒಂದು ಕಡೆ ಕಿತ್ತು ಹಾಕಿದವರ ಕಂಬಳಿ ಕಿತ್ತುಕೊಂಡರು ಎಂದು ಅದಕ್ಕೆ ಕನ್ನಡದಲ್ಲಿ ಅರ್ಥ. ಕೆರೆ ಕಿತ್ತು ಹಾಕಿದ ಹಾಗೆ, ಗೋಲ್ಡ್ ಮೈನ್ ಹಾಳಾದರೆ ನಿಮ್ಮ ಹತ್ತಿರ ಎಲ್ಲಿ ಕಿತ್ತುಕೊಳ್ಳಬೇಕು ? ಅಂಥದು ಏನಿದೆ ? ಎಷ್ಟು ಲಕ್ಷ ರೂಪಾಯಿ, ಎಷ್ಟು ಕೋಟಿ ರೂಪಾಯಿ ಆಗುತ್ತದೆ ? ನಿಮ್ಮನ್ನು ಹೇಗೆ ನಂಬುವುದು ? ಈ ರೀತಿ ಯಾವ ಅಡ್ಜಸ್ಟ್ಮೆಂಟ್ಸ್, ಮ್ಯಾನೋವರ್ಸ್, ನಡೆಯುತ್ತ ಹೋದರೆ ಎಷ್ಟು ಕಷ್ಟಕ್ಕೆ ಬರುತ್ತದೆ! ಇದರಿಂದ ದೇಶಕ್ಕೆ ಹಿತವಿದೆಯೇ? ನಮ್ಮ ಪ್ರಜೆಗಳಿಗೆ ಸುಖವಿದೆಯೇ, ಏನಿದೆ, ಸ್ವಾಮಿ ಖಂಡಿತ ಇದರಲ್ಲಿ. .

ಶ್ರೀ ಎಚ್. ಸಿದ್ದವೀರಪ್ಪ.—ಈ ಅಸೆಂಬ್ಲಿಯಲ್ಲಿ ಅಲ್ಲದೆ ಪ್ರತ್ಯೇಕವಾಗಿ ತಮ್ಮನ್ನು ಕೇಳಿದಾಗ, the only course left open is to nationalise ಎಂದು ತಾವೇ ಹೇಳಿದ್ದೀರಿ.

ಶ್ರೀ ಎಸ್. ಸಿ. ನಾಗಯ್ಯ ರೆಡ್ಡಿ.—ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಏನೇನೋ ಇದೆ ಎಂದು ಅನುಮಾನ.

ಶ್ರೀ ಜೆ. ಮಹಮ್ಮದ್ ಇಮಾಂ.—ಮಾನ್ಯ ಸದಸ್ಯರು ಬಹಳ ಗುಂಭವಾಗಿ ಮಾತನಾಡುತ್ತಿದ್ದಾರೆ. ಬಯಲು ಮಾಡಿ ಹೇಳಿದರೆ ನಮಗೂ ಗೊತ್ತಾಗುತ್ತದೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಇದರಲ್ಲಿ ನೋಡುವುದಾದರೆ ಸರ್ವೋದಯ ಸಮಾಜ ಎಂದು ಇದೆ. ಸರ್ವೋದಯ ಸಮಾಜ ಮಾಡಬೇಕಾದವರು ಹೇಗಿರಬೇಕು ಎಂದರೆ ಬಾಯಿ ಪರಿಶುದ್ಧವಾಗಿರಬೇಕು ; ಕೈ ಶುದ್ಧವಾಗಿರಬೇಕು ; ಕಚ್ಚೆ ಚೆನ್ನಾಗಿ ಭದ್ರವಾಗಿರಬೇಕು. ಇದರಲ್ಲಿ ಯಾವುದಾದರೂ ಒಂದು ಗುಣವಿದೆಯೇನೋ ಲೆಕ್ಕ ಹಾಕಿ, ಸ್ವಾಮಿ ಸರ್ವೋದಯ ಸಮಾಜ ಸ್ಥಾಪನೆ ಮಾಡತಕ್ಕ ಸಮಯದಲ್ಲಿ ಅದನ್ನು ನಡೆಸತಕ್ಕ ವ್ಯಕ್ತಿಗಳಲ್ಲಿ ಇವುಗಳಲ್ಲಿ ಯಾವುದಾದರೂ ಒಂದು ಗುಣ ಬೇಡವೇ ? ವಿಧಾನಸೌಧವನ್ನು ಕಟ್ಟುತ್ತಿದ್ದಾರೆ. ಸರ್ವೋದಯವೆಂದರೆ ಸರ್ವರ ಉದಯವೆಂದು. ಎಷ್ಟು ಜನ ಬಡವರನ್ನು ಹಾಳುಮಾಡಿ ಈ ಕಟ್ಟಡವನ್ನು ಕಟ್ಟುತ್ತಿದ್ದಾರೆ ಗೊತ್ತೇ, ಸ್ವಾಮಿ. ಅದರ ಶೃಂಗಾರಕ್ಕೆ (carvings) ಶೇಕಡ 10-15 ಎಂದರೆ 15 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಯಾರ ದುಡ್ಡು ಎಂದು ಹೀಗೆ ಮಾಡುತ್ತಿದ್ದಾರೆ ? ಬಡವನನ್ನು ಹಾಳುಮಾಡಿ ಕೊಡಬೇಕಾಗಿದೆ. ಮೂರು ಗೋಪುರಗಳಿಗೆ 19 ಲಕ್ಷ ರೂಪಾಯಿ ಖರ್ಚುಮಾಡುತ್ತಾರೆ. ಯಾರ ಒಡವೆ ಎಂದು ಖರ್ಚು ಮಾಡುತ್ತಾರೆ, ಸ್ವಾಮಿ ? ಯಾತಕ್ಕೆ ಈ ಅಟ್ಟಹಾಸದ ಕಟ್ಟಡ ? ಸರ್ವೋದಯ ಸಮಾಜಕ್ಕೂ ಇದಕ್ಕೂ ಏನಾದರೂ ಹೊಂದಿಕೆ ಇದೆಯೇ ಎಂಬುದನ್ನು ನೋಡಿ. ಇನ್ನೊಂದು ವಿಷಯ ಸರ್ವೋದಯ ಸಮಾಜದ ಸಂಬಂಧದಲ್ಲಿ ಜ್ಞಾಪಕಕ್ಕೆ ಬರುತ್ತದೆ. ದೆಹಲಿಯಲ್ಲಿ "ಕೋಟ ಹೌಸ್" ಎಂದು ಇದೆ. ಅದು ರಾಜಾಧಿರಾಜರುಗಳೂ ಮತ್ತು ರಾಜಕುಮಾರರೂ ವಾಸಮಾಡಲು ಕಟ್ಟಿರತಕ್ಕ ಭವನ. ರಾಜಕುಮಾರರು ಬಂದು ಅಲ್ಲಿ ಇರುತ್ತಿದ್ದರು. ಅದು ಇವರಿಗೆ ಸರಿಬೀಳಲಿಲ್ಲ. ಈವಾಗ ಏನು . . . .

Mr. SPEAKER.—I want to draw the attention of the Hon'ble Member to the point that he will get an opportunity to discuss general administration in the course of the budget discussion.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಸರ್ವೋದಯ ಸಮಾಜ ಹೇಗೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದೇನೆ.

Mr. SPEAKER.—I want to draw the attention of the Hon'ble Member again to the fact that he may refer to these things in the course of the budget discussion.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಒಂದು ಮಾತು ಹೇಳಿಬಿಡುತ್ತೇನೆ. ಸರ್ವೋದಯ ಸಮಾಜ ಹೇಗೆ ಸ್ಥಾಪನೆ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೇನೆ. ದೆಹಲಿಯಲ್ಲಿ ಇವರುಗಳು ಬೇರೆ ಕಡೆ ಇದ್ದುಕೊಂಡು ಮೂರು ದಿವಸಕ್ಕೆ ಒಂದು ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ಯಾರ ಒಡವೆ ಎಂದು ಖರ್ಚುಮಾಡುತ್ತಾರೆ ? ತಮ್ಮದೇ ಹಣವಾಗಿದ್ದರೆ ಈ ರೀತಿ ಖರ್ಚು ಮಾಡುತ್ತಿದ್ದರೇ ? ಅದು air conditioned ಗೃಹವಂತೆ. ಇವರುಗಳಿಗೆ ರಾಜಾಧಿರಾಜರು, ರಾಜಕುಮಾರರು ಇದ್ದ ಮನೆ ಕೂಡ ಅನಾವಶ್ಯಕವಾಯಿತು. ಈ ರೀತಿ ಖರ್ಚು ಮಾಡುವುದಕ್ಕೂ ಸರ್ವೋದಯ ಸಮಾಜಕ್ಕೂ ಹೊಂದಿಕೆ ಇದೆಯೇ ?

ವಿಧಾನಸೌಧದ ವಿಚಾರದಲ್ಲಿ ಒಂದು ವಿಷಯ ಹೇಳುತ್ತೇನೆ. ಅದನ್ನು ಹೇಳಬಹುದೋ ಇಲ್ಲವೋ ಎಂದು ಗಾಬರಿಯಾಗುತ್ತದೆ. ಅದಕ್ಕೆ ಒಂದು Expert Committee ನೇಮಕಮಾಡುವುದು ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ. ಅದರಲ್ಲಿ ಏನಾಗಿದೆ ಎನ್ನುವುದನ್ನು ನೋಡುವುದಕ್ಕೇ ಅಸಾಧ್ಯ. ಒಂದು ಉದಾಹರಣೆ ಕೊಡುತ್ತೇನೆ. ಅಲ್ಲಿ ಕಂಟ್ರಾಕ್ಟರು ಇದ್ದಾರೆ. ಅವರ ಕೆಳಗೆ ಸಬ್-ಕಂಟ್ರಾಕ್ಟರು ಇದ್ದಾರೆ. ಆ ಸಬ್-ಕಂಟ್ರಾಕ್ಟರು ಒಬ್ಬ ವ್ಯಕ್ತಿಗೆ 75 ಸಾವಿರ ರೂಪಾಯಿ ಕೊಡಿ ಎಂದು ಒಂದು ಕಾಗದ ಕೊಟ್ಟ. ಆ ಕಾಗದವನ್ನು ತೆಗೆದುಕೊಂಡು ಹೋಗಿ ಹಣವನ್ನು ಪಡೆದು ಒಂದು ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅದನ್ನು ಉಪಯೋಗಿಸಿದ್ದಾರೆ. ಇದಕ್ಕೆಲ್ಲ ಬೇಕಾದರೆ concrete example ಕೊಡುತ್ತೇನೆ.

Mr. SPEAKER.—The Hon'ble Member will be held responsible for the statements he makes.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ನಾನು ಹೆಸರನ್ನು ಹೇಳಿದ್ದರೆ ತಾನೇ. ಯಾರು ಈ ರೀತಿ ಮಾಡಿದರೋ ಅವರಿಗೆ ಅನ್ವಯಿಸುತ್ತದೆ, ಬೇಕಾದರೆ ವಿಚಾರಣೆ ಮಾಡಲಿ, ಎಲ್ಲವೂ ಈಚೆಗೆ ಬರುತ್ತದೆ. ಹೀಗೆ ನಾನು ಯಾವುದಾದರೂ ವಿಷಯಗಳನ್ನು ಹೇಳಿದರೆ ಸತ್ಯವಿಲ್ಲದೆ ಹೇಳುವುದಿಲ್ಲವೆಂಬುದು ತಮಗೇ ಗೊತ್ತಿದೆ.

Mr. SPEAKER.—May I bring it to the notice of the Hon'ble Member that such references may be avoided ? Even if such points are to be referred to, there is a method laid down under the Rules of Procedure which should guide us. The Hon'ble Member should conduct himself strictly in accordance with the Rules of Procedure. Otherwise it is difficult to conduct the business here.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ತಾವು ಹೇಳಿದಿರಲ್ಲ ಅದಕ್ಕೂ ಇಲ್ಲಿ ಮಾಡುವುದಕ್ಕೂ ವ್ಯತ್ಯಾಸವಿದೆಯಲ್ಲ: ಅದೇನೇ ಸರ್ವೋದಯ ಸಮಾಜ ? ಆದುದರಿಂದ ಖಂಡಿತವಾಗಿ ನಾನು ಯಾವಾಗ ಹೇಳಿದರೂ ವಿಷಯಗಳಿಲ್ಲದೆ ಸತ್ಯಕ್ಕೆ ದೂರವಾದ, ನನ್ನ ಮನಸ್ಸಿಗೆ ಹೊಳೆಯದ, ನನ್ನ ಆತ್ಮಕ್ಕೆ ತೃಪ್ತಿ ಇಲ್ಲದ ಯಾವ ಮಾತನ್ನೂ ಆಡುವುದಿಲ್ಲ. ಭಾಷಣವನ್ನು ಮಾಡುವುದಕ್ಕೂ ಏಳುವುದಿಲ್ಲ. ಮನಸ್ಸಿಗೆ ಬಂದರೆ ಅದನ್ನು ತಡೆಯುವುದಿಲ್ಲ. ಅದು ನನ್ನ ದುರದೃಷ್ಟವೆಂದು ಹೇಳಬೇಕು. ಇವುಗಳನ್ನೆಲ್ಲ ನೋಡಿದರೆ ಅಸೆಂಬ್ಲಿ ಬಿಟ್ಟು ಮನೆಗೆ ಹೋಗೋಣವೇ ಎಂದು ಎನ್ನಿಸುತ್ತದೆ.

